ಐಕ್ಯರಂಗ

ವಾ ರ ಪ ತ್ರಿ ಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 52 ಡಿಸೆಂಬರ್ 28, 1986 ಬೆಲೆ 80 ಪೈಸೆ.

ಒಳಗಿನ ಪುಟಗಳಲ್ಲಿ

ಮುಂದಿನ ಸಂಚಿಕೆಯಲ್ಲಿ

ಬಿರುಸಿನ ಜಿಲ್ಲಾ ಪರಿಷತ್ ಚುನಾವಣೆ

78 ಕ್ಷೇತ್ರಗಳಲ್ಲಿ ಸಿ. ಪಿ. ಐ. (ಎಂ) ಅಭ್ಯರ್ಥಿಗಳ ಹಾಗೂ ಸಿ. ಪಿ. ಐ. (ಎಂ) ಬೆಂಬಲಿತ ಅಭ್ಯರ್ಥಿಗಳ ಸ್ಪರ್ಧೆ

ನಾಮಪತ್ರ ಹಿಂತೆಗೆಯುವ ಅಂತಿಮ ದಿನದೊಂದಿಗೆ ಪ್ರತಿ ಕ್ಷೇತ್ರದಲ್ಲಿಯೂ ಜಿಲ್ಲಾ ಪರಿಷತ್ ಸ್ಪರ್ಧೆಯ ಕಣದಲ್ಲಿರುವವರಾರೆಂಬುದು ಸ್ಪಷ್ಟವಾಗಿದೆ. ನಮ್ಮ ಪಕ್ಷ ಯಾವ ಹೊಂದಾಣಿಕೆಯೂ ಇಲ್ಲದೆ 15 ಜಿಲ್ಲೆಗಳ 78 ಸ್ಥಾನಗಳಲ್ಲಿ ಕಣಕ್ಕಿಳಿದಿದೆ. ರಾಜ್ಯದಲ್ಲಿ ಜಿಲ್ಲಾ ಪರಿಷತ್ ಚುಣಾವಣೆಗಳಿಗಾಗಿ ಚುನಾವಣಾ ಪ್ರಣಾಳಿಕೆಯನ್ನು ರೂಪಿಸಿದ ಏಕಮಾತ್ರ ಪಕ್ಷ ಸಿ.ಪಿ.ಐ. (ಎಂ). ಈ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡುತ್ತಾ ಕಾಂ.ಪಿ. ರಾಮಚಂದ್ರರಾವ್, ಕಾಂ. ಸೂರ್ಯ ನಾರಾಯಣರಾವ್, ಹಾಗೂ ಕಾಂ. ಎನ್. ಕೆ. ಉಪಾಧ್ಯಾಯರು ಜಿಲ್ಲಾ ಪರಿಷತ್ ಚುನಾವಣೆಯ ಪರಿಸ್ಥಿತಿಯ ಬಗ್ಗೆ ವಿವರಿಸಿದರು.

1983ರ ಚುನಾವಣೆಯಲ್ಲಿ ನಾಲ್ಕು ಪಕ್ಷಗಳು ಕಾಂಗ್ರೆಸ್‌ನ ಏಕ ಪಕ್ಷ ಸರ್ವಾಧಿಕಾರ ಹಾಗೂ ಏಕ ವ್ಯಕ್ತಿ ಸರ್ವಾಧಿಕಾರದ ವಿರುದ್ಧ ಒಗ್ಗಟ್ಟಾಗಿ ಹೋರಾಡಿದೆವು. ಅದು 1984ರ ಲೋಕಸಭಾ ಚುನಾವಣೆ ಹಾಗೂ 1985ರ ವಿಧಾನಸಭಾ ಚುನಾವಣೆಗಳಲ್ಲಿಯೂ ಮುಂದುವರಿಯಿತು. ಆದರೆ 1985ರ ಚುನಾವಣೆಗಳಲ್ಲಿ 139 ಸ್ಥಾನದ ಬಹುಮತವನ್ನುಗಳಿಸಿದ ಕೂಡಲೇ ಜನತಾ ಪಕ್ಷಕ್ಕೆ ಕೇಂದ್ರ ರಾಜ್ಯ ಸಂಬಂಧಗಳ ಪುನರ್‌ರಚನೆಯ ಬಗ್ಗೆ ಇತರಪ್ರಜಾಸತ್ತಾತ್ಮಕ ಪ್ರಶ್ನೆಗಳ ಬಗ್ಗೆ ಒಗ್ಗಟ್ಟಾಗಿ ಹೋರಾಡ ಬೇಕಾದ ಅವಶ್ಯಕತೆಯೇ ಇಲ್ಲವಾದಂತೆ ಕಾಣುತ್ತದೆ.

ಜನತಾ ಪಕ್ಷದ ಜಿಲ್ಲಾ ಘಟಕಗಳ ನಾಯಕರು ಅನೇಕ ಕಡೆಗಳಲ್ಲಿ ನಮ್ಮ ಪಕ್ಷದ ಜೊತೆ ಹೊಂದಾಣಿಕೆಯನ್ನು ಬಯಸಿದರು. ಮುಖ್ಯವಾಗಿ ದ ಕ. ಕೋಲಾರ, ಗುಲ್ಬರ್ಗಾ ಬೆಳೆಗಳಲ್ಲಿ (ರಾಯಚೂರು ಜಿಲ್ಲೆಯ ಬಗ್ಗೆ 3ನೇ ಪುಟ ನೋಡಿ) ಆದರೆ ರಾಜ್ಯನಾಯಕತ್ವ ಸುತ್ತೋಲೆ ಕಳುಹಿಸಿ ಯಾವುದೇ ಪಕ್ಷದ ಜೊತೆ ಯಾವುದೇ ಹೊಂದಾಣಿಕೆ ಮಾಡಿಕೊಳ್ಳಬಾರದೆಂಬು ಆದೇಶಕ್ಕೆ ಅನುಗುಣವಾಗಿ ಆ ಘಟಕಗಳು ಕೊನೆಗೆ ಹೊಂದಾಣಿಕೆ ಮಾಡಿಕೊಳ್ಳಲು ಹಿಂದೆಗೆದವು. ಕೋಲಾರದಲ್ಲಿ ಜನತಾ ಪಕ್ಷದ ನಾಯಕರು ಕೇವಲ ಎರಡೇ ತಾಲ್ಲೂಕುಗಳಲ್ಲಿ ಬಾಗೆಪಲ್ಲಿ, ಮುಳಬಾಗಿಲುಗಳಲ್ಲಿ ಮಾತ್ರಹೊಂದಾಣಿಕೆ ಬಯಸಿದರು. ಅದಕ್ಕೆ ನಮ್ಮ ಪಕ್ಷ ಒಪ್ಪದೇ ನಿರಾಕರಿಸಿತು ಎಂದು ಹೇಳಿದರು.

ಇದಲ್ಲದೆ ಆಳುವ ಪಕ್ಷದ ಸ್ಥಳೀಯ ನಾಯಕರು ಅನೇಕ ಕ್ಷೇತ್ರಗಳಲ್ಲಿ ಮತದಾರರಿಗೆ, ಸಿ.ಪಿ.ಐ. (ಎಂ) ಗೆ ಮತ ನೀಡಿದರೆ ಮನೆಗಳಿಂದ ಹೊಲಗಳಿಂದ ಒಕ್ಕಲೆಬ್ಬಿಸುತ್ತೇವೆಂದು ಬೆದರಿಸುತ್ತಿದ್ದಾರೆ. ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿ ಮತಗಳನ್ನು ಯಾರಿಗೆ ಹಾಕಿದ್ದೇವೆಂದು ತಮಗೆ ತೋರಿಸಿದ ಬಳಿಕವೇ ಮತಪೆಟ್ಟಿಗೆಯಲ್ಲಿ ಹಾಕಬೇಕೆಂದುಸ್ಥಳೀಯ ಜನತಾ ಪಕ್ಷದ ನಾಯಕರು ಒತ್ತಾಯಿಸುತ್ತಿದ್ದಾರೆಂದು ಈ ಬಗ್ಗೆ ಮುಖ್ಯಚುನಾವಣಾಧಿಕಾರಿಗಳಿಗೆ ದೂರು ನೀಡಲಿರುವುದಾಗಿ ತಿಳಿಸಿದರು.

ಸಿ.ಪಿ.ಐ. (ಎಂ) ಹಾಗೂ ಅದರ ಬೆಂಬಲ ಪಡೆದ ಅಭ್ಯರ್ಥಿಗಳ ಜಿಲ್ಲಾವಾರು ವಿವರ ಹೀಗಿದೆ.

ಕೋಲಾರ	18
ದ.ಕ.	10
ಬಿಜಾಪುರ	8
ರಾಯಚೂರು	6
ಗುಲ್ಬರ್ಗ	6
ಬಳ್ಳಾರಿ	7
ಚಿಕ್ಕಮಗಳೂರು	3
ಹಾಸನ	2
ಶಿವಮೊಗ್ಗ	3
ಕೊಡಗು	4
ಮೈಸೂರು	3
ಉ.ಕನ್ನಡ	2
ತುಮಕೂರು	2
ಬೀದರ್	1
ಬೆಂಗಳೂರು	3
ಒಟ್ಟು	78

ನಂತರ ಪಕ್ಷದ ಪ್ರಣಾಳಿಕೆಯಬಗ್ಗೆ ಚುನಾವಣೆಗಳ ಬಗ್ಗೆ ಪತ್ರಕರ್ತರು ಕೇಳಿದ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿದರು.

ಕೃಷಿ ಕಾರ್ಮಿಕರ ಎರಡನೇ ಸಮ್ಮೇಳನ : ರೈತರ ಐಕ್ಯತೆ ಸಾಧಿಸುವ ದೃಢ ನಿರ್ಧಾರ

ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಎರಡನೇ ಸಮ್ಮೇಳನ ಕೇರಳದ ಪಾಲ್ಘಾಟ್‌ನಲ್ಲಿ ಡಿಸೆಂಬರ್ 10 ರಿಂದ 13ರ ವರೆಗೆ ಜರುಗಿತು. ಪಶ್ಚಿಮ ಬಂಗಾಳದ ಮಿಡ್ನಾಪುರದಲ್ಲಿ ಜರಗಿದ ಸ್ಥಾಪನಾ ಸಮ್ಮೇಳನದ ನಾಲ್ಕು ವರ್ಷಗಳ ನಂತರ ನಡೆದ ಈ ಸಮ್ಮೇಳನದಲ್ಲಿ ಸುಮಾರು 11ಲಕ್ಷ 33 ಸಾವಿರ ಕೃಷಿ ಕಾರ್ಮಿಕರನ್ನು ಪ್ರತಿನಿಧಿಸಿದ 483 ಪ್ರತಿನಿಧಿಗಳು ಹಾಗೂ ವೀಕ್ಷಕರು ನಾಲ್ಕು ದಿನಗಳ ಕಾಲ ದೇಶದ ಸದ್ಯದ ಆರ್ಥಿಕ ಬಿಕ್ಕಟ್ಟಿನಿಂದ ಅತ್ಯಂತ ಹೆಚ್ಚು ಸಂಕಟಕೊಳಗಾಗಿರುವ, ದೇಶದ ಈ ಅತ್ಯಂತ ಶೋಷಿತ ಹಾಗೂ ದಲಿತ ಜನವಿಭಾಗದ ಸಮಸ್ಯೆಗಳನ್ನು, ಅಸಂತೃಪ್ತಿಗಳನ್ನು, ಹೋರಾಟಗಳನ್ನು ಹಾಗೂ ಸಂಘಟನೆಯ ಸ್ಥಿತಿಯನ್ನು 'ಸುಂದರಯ್ಯನಗರ' ಎಂದು ಮರು ನಾಮಕರಣ ಗೊಂಡ ಪಾಲ್ಘಾಟ್‌ನ ಪುರಭವನದಲ್ಲಿ ಕೂಲಂಕುಷವಾಗಿ ವಿಮರ್ಶಿಸಿದರು.

ಈ ನಾಲ್ಕು ದಿನಗಳಲ್ಲಂತೂ ಪಾಲ್ಘಾಟ್ ಪಟ್ಟಣ ಕೆಂಬಾವುಟಗಳಿಂದ ಕೆಂಬಣ್ಣದ ತೋರಣಗಳಿಂದ, ವಿವಿಧ ಸಾಮೂಹಿಕ ಸಂಘಟನೆಗಳ ಕೊಡುಗೆಗಳಾದ 71 ಸ್ವಾಗತ ಕಮಾನುಗಳಿಂದ ಕಂಗೊಳಿಸುತ್ತಿತ್ತು. ಸಮ್ಮೇಳನದ ತಯಾರಿಯಲ್ಲೂ ಸಮಸ್ತ ಪಾಲ್ಘಾಟ್ ಜಿಲ್ಲೆಯ ಕೃಷಿಕಾರ್ಮಿಕರನ್ನು, ಇತರ ಕಾರ್ಮಿಕರ ಹಾಗೂ ನೌಕರರ ಸಂಘಟನೆಗಳನ್ನು ಪೂರ್ಣವಾಗಿ ತೊಡಗಿಸಿರುವುದು ಕಂಡುಬಂತು.

ಈ ಸಮ್ಮೇಳನ ಆರಂಭವಾಗುವ ಮೊದಲು ನಡೆದ ಒಂದು ಗಮನಾರ್ಹ ಕಾರ್ಯಕ್ರಮವೆಂದರೆ ಡಿಸೆಂಬರ್ 9ರ ಸಂಜೆ ಪಾಲ್ಘಾಟ್‌ನ ಚಾರಿತ್ರಿಕ ಕೋಟೆ ಮೈದಾನದಲ್ಲಿ ನಡೆದ ಹುತಾತ್ಮರ ಧ್ವಜಾರೋಹಣ. ಹುತಾತ್ಮರ ಈ ಧ್ವಜ ತಮಿಳುನಾಡಿನ ತಂಜಾವೂರು ಜಿಲ್ಲೆಯ ಕೃಷಿಕಾರ್ಮಿಕರ ಚಾರಿತ್ರಿಕ ಸ್ಮರಣೀಯ ಸ್ಥಳವಾದ ಕಿಲ್ವನ್ಮಣಿಯಿಂದ ಡಿ.6 ರಂದು ಮೆರವಣಿಗೆಯಲ್ಲಿ ಕೊಯಮತ್ತೂರು, ವೇಲಂತವಳು ಮಾರ್ಗವಾಗಿ ಬಂದಿದ್ದರೆ, ಅದರ ಧ್ವಜಸ್ತಂಭ ಕೇರಳದ ಕೊಯಿಕೋಡ್ ಜಿಲ್ಲೆಯ ಹುತಾತ್ಮ ಕೆ.ಪಿ. ಕುಂಜಿರಾಮನ್‌ರವರ ಊರಾದ ವನ್ನೆಲ್‌ನಿಂದ ಡಿ.7 ರಂದು ಹೊರಟು, ಕೆಂಪುಸ್ವಯಂಸೇವಕರ ಇನ್ನೊಂದು ಮೆರವಣಿಗೆಯಲ್ಲಿ ಪಾಲ್ಘಾಟ್ ತಲಪಿತು. ಈ ಎರಡೂ ಮೆರವಣಿಗೆಗಳಿಗೆ ದಾರಿಯುದ್ದಕ್ಕೂ ಕೃಷಿಕಾರ್ಮಿಕರ ಹಾಗೂ ಇತರ ದುಡಿಯುವ ಜನರ ಮನದುಂಬಿದ ಸ್ವಾಗತ ಕಾದಿತ್ತು. ವಿಶೇಷವಾಗಿ ಭೂಮಾಲಿಕರ ಗೂಂಡಾಗಳಿಂದ ಕೊಲೆಯಾದ ಕೃಷ್ಣನ್ ಉನ್ನಿ ಕುರುಪ್‌ರವರ ಊರಾದ ಕಂಬಿಲ್ಲಿಚುಂಗಮ್‌ನಲ್ಲಿ ಹಾಗೂ ಇನ್ನೊಬ್ಬ ಹುತಾತ್ಮ ಕೃಷಿಕಾರ್ಮಿಕ ಅರು ಎಂಬವರ ಊರಾದ ಆನಂದಪಲ್ಲಂನಲ್ಲಿ ಈ ಹುತಾತ್ಮರ ಧ್ವಜಾರೋಹಣವನ್ನು ಹರಿಕಿಶನ್‌ಸಿಂಗ್ ಸುರ್ಜಿತ್‌ರವರು ನಡೆಸಿದರು.

ಡಿಸೆಂಬರ್ 10ರಂದು ಸಮ್ಮೇಳನವನ್ನು ಉದ್ಘಾಟಿಸುತ್ತಾ ಕಾಂ. ಸುರ್ಜಿತ್ ತಮ್ಮ ಭಾಷಣದಲ್ಲಿ ಕೃಷಿ ಕ್ಷೇತ್ರದ ಸದ್ಯದ ಲಕ್ಷಣಗಳತ್ತ ಗಮನ ಸೆಳೆದರು. ಒಂದೆಡೆ ಜಮೀನು ಕೆಲವೇ ಕೈಗಳಲ್ಲಿ ಕೇಂದ್ರೀಕರಣಗೊಳ್ಳುತ್ತಿರುವ ಪ್ರಕ್ರಿಯೆ ಮುಂದುವರಿಯುತ್ತಿದ್ದು, ದೊಡ್ಡ ಪ್ರಮಾಣದ ವೈಯಕ್ತಿಕ ಹಿಡುವಳಿಗಳು, ಬಂಡವಾಳಶಾಹೀ ಕೃಷಿಗಾರಿಕೆ ಕಂಡುಬರುತ್ತಿದ್ದರೆ ಇನ್ನೊಂದೆಡೆ ಗ್ರಾಮೀಣಾ ಸಮಾಜದ ಅತ್ಯಂತ ಬಡ ಜನವಿಭಾಗಗಳ ಮೇಲೆ

(8ನೇ ಪುಟನೋಡಿ)

ಸಿ. ಪಿ. ಐ. (ಎಂ) - ಬೆಂಬಲಿತ ಅಭ್ಯರ್ಥಿಗಳ ವಿಜಯಕ್ಕಾಗಿ ದುಡಿಯಿರಿ

ವರದಿ : ಎಸ್. ಆರ್. ಆರಾಧ್ಯ

ಎಸ್. ಎಫ್. ಐ. 6ನೇ ಸಮ್ಮೇಳನ

ಭಾರತ ವಿದ್ಯಾರ್ಥಿ ಚಳುವಳಿಯ ಒಂದು ಮೈಲಿಗಲ್ಲು

ಡಿಸೆಂಬರ್ 11ರಂದು ಬೃಹತ್ ವಿದ್ಯಾರ್ಥಿ ಪ್ರದರ್ಶನ ಜರುಗಿದ ಬಳಿಕ 12 ರಂದು ಮುಂಜಾನೆ ಲಕ್ಷ್ಮಿನಾರಾಯಣ ಪ್ರಾಂಗಣದಿಂದ ಪ್ರತಿನಿಧಿಗಳು ತಂಡೋಪತಂಡವಾಗಿ ವಿವಿಧ ಭಾರತೀಯ ಭಾಷೆಗಳ ಘೋಷಣೆಗಳ ನಿನಾದದೊಂದಿಗೆ ಭಾರತದ ಭಾವೈಕ್ಯತೆಯನ್ನು ಸಾರುತ್ತಾ ಜಸ್ ಬೀರ ಸಿಂಗ್ ನಗರದತ್ತ ಧಾವಿಸಿದರು. ಆಂಧ್ರ ಪ್ರಜಾನಾಟ್ಯ ಮಂಡಳಿಯವರ ಲಾಲ್‌ಸಲಾವ್ ಗೀತೆಯ ಬಳಿಕ ಎಸ್. ಎಫ್. ಐ. ಅಧ್ಯಕ್ಷರಾದ ಕಾ|ಸೀತಾರಾಮ್ ಯಚೂರಿಯವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನದ ಕಾರ್ಯಕಲಾಪಗಳನ್ನು ವಿದ್ಯುಕ್ತವಾಗಿ ಪ್ರಾರಂಭಿಸಿದರು. ನಂತರ ಹುತಾತ್ಮ ಸ್ಥಂಭದ ಬಳಿ ಪುಷ್ಪಾಂಜಲಿ ಅರ್ಪಿಸಿ ಕೆಂಪು ವಂದನೆ ಸಲ್ಲಿಸಿದ ಬಳಿಕ ಪ್ರತಿನಿಧಿಗಳು ಸಂಭಾಂಗಣದೊಳಗೆ ಪ್ರೇವೇಶಿಸಿದರು. ಕಾ|| ಸೀತಾರಾಮು ಯೆಚೂರಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಉದ್ಘಾಟನಾ ಸಮಾರಂಭದ ವೇದಿಕೆಗೆ ವಿದೇಶಿ ಸೌಹಾರ್ದ ಪ್ರತಿನಿದಿಗಳನ್ನು ಹಾಗೂ ಇತರೆ ಗಣ್ಯನಾಯಕರನ್ನು ಸ್ವಾಗತ ಸಮಿತಿಪ್ರಧಾನ ಕಾರ್ಯದರ್ಶಿ ಕಾ|| ವಿ. ಕೃಷ್ಣಯ್ಯನವರು ಆಹ್ವಾನಿಸಿದರು. ಎಸ್.ಎಫ್.ಐ. ಹರಿಯಾಣ ರಾಜ್ಯ ಸಮಿತಿ ಅಧ್ಯಕ್ಷರಾಗಿದ್ದ ಕಾಂ ಜಸ್‌ಬೀರ್‌ಸಿಂಗ್ ಮೊದಲುಗೊಂಡು ಕಳೆದ 3ವರ್ಷಗಳ ಅವಧಿಯಲ್ಲಿ ಗತಿಸಿದ 12 ಮಂದಿ ವಿದ್ಯಾರ್ಥಿ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದ ಬಳಿಕ ಶೋಷಿತ ಜನತೆಯ ಚಳುವಳಿಯ ಮಹಾನಾಯಕ ಪುಚ್ಚಲಪಲ್ಲಿ ಸುಂದರಯ್ಯ ಆದಿಯಾಗಿ ಅನೇಕ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ನಾಯಕರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿ ಸಮ್ಮೇಳನವು ಮೌನಾಚರಣೆಯ ಮೂಲಕ ಗೌರವ ಸಲ್ಲಿಸಿತು.

ಸ್ವಾಗತ ಸಮಿತಿ ಅಧ್ಯಕ್ಷರಾದ ನಾಗಾರ್ಜುನ ವಿ. ವಿ. ಮಾಜಿ ಉಪಕುಲಪತಿ ಡಾ|| ಕೆ.ಆರ್. ರಾಮಮೋಹನ ರಾವ್ ಸ್ವಾಗತ ಕೋರಿದ ಬಳಿಕ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರು ಹಾಗೂ ಸೋಶಿಯಲ್ ಸೈಂಟಿಸ್ಟ್ ಸಂಪಾದಕರಾದ ಪ್ರೊ|| ಪ್ರಭಾತ್ ಪಟ್ನಾಯಕ್‌ರವರು ಮೂರನೇ ಜಗತ್ತಿನ ರಾಷ್ಟ್ರಗಳ ಪರಿಸ್ಥಿತಿಯನ್ನು ವಿವರಿಸುತ್ತಾ ಭಾರತ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಕೂಡ ಸಾಮ್ರಾಜ್ಯಶಾಹಿ ಶಕ್ತಿಗಳ ಹಿಡಿತ ಪ್ರಬಲವಾಗುತ್ತಿರುವ ಅಪಾಯದ ಬಗ್ಗೆ ಎಚ್ಚರಿಸಿದರು. ನೂತನ ಆರ್ಥಿಕ ನೀತಿಯು ಈ ಒತ್ತಡದ ಪರಿಣಾಮವಾಗಿದೆಯೆಂದು ವಿವರಿಸಿದರು. ಗ್ರಾಮೀಣ ಪ್ರದೇಶದಲ್ಲಿ ಹಳೆಯ ಭೂ ಸಂಬಂಧಗಳನ್ನು ಕೊನೆಗಾಣಿಸದೆ ಕೃಷಿ ಅಭಿವೃದ್ಧಿ ಸಾಧ್ಯವಿಲ್ಲವೆಂದು ನುಡಿದರು. ಅಸಮಾನ ಆರ್ಥಿಕ ಬೆಳವಣಿಗೆಯ ಪರಿಣಾಮವಾಗಿ ವಿವಿದ ಪ್ರಾಂತೀಯ ಜನರ ನಡುವೆ ದ್ವೇಶಾಸೂಯೇಗಳು ಮೂಡುತ್ತಿವೆಯೆಂದು ವಿಶ್ಲೇಷಿಸಿದರು ಕಾಲಕ್ರಮೇಣ ಅರ್ಥಹೀನವಾಗುತ್ತಿರುವ ಕುಲಮತ ತತ್ವಗಳನ್ನು ಆಧುನಿಕ ಬಂಡವಾಳಶಾಹಿ ವರ್ಗವು ಕೂಡ ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ವಿವರಿಸಿದರು ಆಳುವ ವರ್ಗದ ಹೊಸ ಅವಶ್ಯಕತೆಗಳಿಗೆ ಅನುಗುಣವಾಗಿ ಹೊಸ ಶಿಕ್ಷಣ ನೀತಿಯೊಂದನ್ನು ರೂಪಿಸಲಾಗಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಎಸ್. ಎಫ್. ಐ. ನೀಡಿರುವ "ಅಧ್ಯಯನ ಮತ್ತು ಹೋರಾಟದ" ಘೋಷಣೆಯ ಅರ್ಥ ಕೇವಲ ಶಿಕ್ಷಣ ಮತ್ತು ಹೋರಾಟವೆಂದಲ್ಲ, ಹೋರಾಟಕ್ಕಾಗಿ ಅಧ್ಯಯನವೆಂದು ಗ್ರಹಿಸಬೇಕೆಂದು ತಿಳಿಸಿದರು ಸೈದ್ಧಾಂತಿಕ ರಂಗದಲ್ಲಿ ಸಾಮ್ರಾಜ್ಯಶಾಹಿಪರ ಪ್ರಚಾರ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಹೋರಾಡುವುದು ಒಂದು ಪ್ರಧಾನ ಕರ್ತವ್ಯವಾಗಿ ಸ್ವೀಕರಿಸಬೇಕೆಂದು ಕರೆ ನೀಡಿದರು ಅನೇಕ ಸೌಹಾರ್ದ ಸಂಘಟನೆಗಳ ಪ್ರತಿನಿಧಿಗಳು ಸಮ್ಮೇಳನಕ್ಕೆ ಶುಭಾಶಯ ಕೋರಿದರು.

ಸಮ್ಮೇಳನದಲ್ಲಿ 15 ಲಕ್ಷಕ್ಕೂ ಮೀರಿ ಸದಸ್ಯತ್ವವನ್ನು ಪ್ರತಿನಿಧಿಸಿ 1750 ಸದಸ್ಯರಿಗೊಬ್ಬರಂತೆ 22 ರಾಜ್ಯಗಳಿಂದ 898 ಪ್ರತಿನಿದಿಗಳು ಮತ್ತು 91 ಮಂದಿ ವೀಕ್ಷಕರು ಭಾಗವಹಿಸಿದ್ದರು. ಪ್ರದಾನ ಕಾರ್ಯದರ್ಶಿ ಕಾಂ. ನೇಪಾಲ್‌ದೇವ್ ಭಟ್ಟಾಚಾರ್ಯರವರು ಮಂಡಿಸಿದ ಕರಡು ವರದಿಯ ಮೇಲೆ ಸುದೀರ್ಘ ಚರ್ಚೆ ನಡೆದ ಬಳಿಕ ಸರ್ವಾನುಮತದಿಂದ ವರದಿಯನ್ನು ಅಂಗೀಕರಿಸಲಾಯಿತು. ಕರ್ನಾಟಕ ಪ್ರತಿನಿಧಿ ತಂಡದ ಪತಿಯಿಂದ ಕಾಂ. ಜಿ. ಸಿ. ಬಯ್ಯಾರೆಡ್ಡಿ ಕಾಂ. ಎಸ್. ವೈ. ಗುರುಶಾಂತ್ ಮತ್ತು ಎಸ್. ಆರ್. ಲೀಲಾವತಿಯವರು ಚರ್ಚೆಯಲ್ಲಿ ಭಾಗವಹಿಸಿದ್ದರು. ವಿಶ್ವಶಾಂತಿ, ನಿಕರಾಗುವ, ದಕ್ಷಿಣ ಆಫ್ರಿಕ, ಅಸ್ಸಾಂ,ಪಂಜಾಬ್ ಪರಿಸ್ಥಿತಿ ಗೂರ್ಖಾಲ್ಯಾಂಡ್ ಚಳುವಳಿ, ನಿರುದ್ಯೋಗ ಸಮಸ್ಯೆ, ನೂತನ ಶಿಕ್ಷಣ ನೀತಿ ಹಾಗೂ ಇನ್ನಿತರೆ ಪ್ರಮುಖ ವಿಷಯಗಳ ಕುರಿತಂತೆ ಸಮ್ಮೇಳನವು ಅನೇಕ ನಿರ್ಣಯಗಳನ್ನು ಅಂಗೀಕರಿಸಿದೆ. ಸಮೂಹ ಮಾಧ್ಯಮ ಮತ್ತು ಸಂಸ್ಕೃತಿಯ ಕುರಿತಂತೆ ಒಂದು ಪ್ರತ್ಯೇಕ ನಿರ್ಣಯವನ್ನು ನಿರ್ಣಯ ಮಂಡಳಿಯ ಪರವಾಗಿ ಎಸ್. ಆರ್. ಆರಾಧ್ಯ ಮಂಡಿಸಿದರು. ಆಯ ವ್ಯಯ ಪತ್ರ ಮಂಡನೆ, ಪ್ರತಿನಿಧಿಗಳ ಪರಿಶೀಲನಾ ವರದಿಯ ಬಳಿಕ ನೂತನ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಚುನಾಯಿಸಲಾಯಿತು. ವಿದ್ಯಾರ್ಥಿ ಚಳುವಳಿಯಿಂದ ನಿರ್ಗಮಿಸಿದ ನಾಯಕರ ಸೇವೆಯನ್ನು ಸ್ಮರಿಸಿ ಅಭಿನಂದನಾ ನಿರ್ಣಯವನ್ನು ಅಂಗೀಕರಿಸಿದ ಬಳಿಕ ಉತ್ಸಾಹಭರಿತ ಘೋಷಣೆಗಳೊಂದಿಗೆ ಸಮ್ಮೇಳನದ ಕಾರ್ಯಕಲಾಪವು ಮುಕ್ತಾಯಗೊಂಡಿತು. ದೇಶದ ವಿಭಿನ್ನ ಹಿನ್ನೆಲೆಯ ಪ್ರತಿನಿಧಿಗಳೆಲ್ಲರು ಒಂದಾಗಿ ಒಂದೇ ಗುರಿಯತ್ತ ಮುನ್ನಡೆಯುವ ಪ್ರತಿಜ್ಞೆಯೊಂದಿಗೆ ಮರಳಿದರು.

ಪ್ರತಿನಿಧಿಗಳು

ಕಾಲೇಜ್ ವಿದ್ಯಾರ್ಥಿಗಳು 392 ತಾಂತ್ರಿಕ ವೈದ್ಯಕೀಯ ವಿದ್ಯಾರ್ಥಿಗಳು 172, ಹೈಸ್ಕೂಲ್ ವಿದ್ಯಾರ್ಥಿಗಳು 39. ವಿದ್ಯಾಭ್ಯಾಸ ಮುಗಿಸಿದವರು 374, ವಿದ್ಯಾರ್ಥಿನಿಯರು 80. ಪ್ರತಿನಿಧಿಗಳಲ್ಲಿ ಅತ್ಯಧಿಕ ಭಾಗ 604 ಮಂದಿ ಮಧ್ಯಮ ವರ್ಗದಿಂದ ಬಂದವರಾಗಿರುತ್ತಾರೆ. 155 ಮಂದಿ ಕಾರ್ಮಿಕ ಕುಟುಂಬಗಳಿಂದ, 136 ಮಂದಿ ರೈತ ಹಾಗೂ 75 ಮಂದಿ ಕೃಷಿ ಕಾರ್ಮಿಕರ ಕುಟುಂಬಗಳಿಂದ ಬಂದವರಾಗಿರುತ್ತಾರೆ. ಭೂಮಾಲೀಕರ ಮನೆಗಳಿಂದ ನಾಲ್ವರು ಹಾಗೂ ಸಣ್ಣ ಬಂಡವಾಳಶಾಹಿ ಮನೆತನದಿಂದ ಮೂವರು ಪ್ರತಿನಿಧಿಗಳಿರುತ್ತಾರೆ.

ಪ್ರತಿನಿಧಿಗಳಲ್ಲಿ 334 ರಾಜ್ಯ ಸಮಿತಿ ಸದಸ್ಯರು, 489 ಮಂದಿ ಜಿಲ್ಲಾ ಸಮಿತಿ ಸದಸ್ಯರಾಗಿದ್ದು 25 ಮಂದಿ ಯಾವುದೇ ಸಮಿತಿಗಳಲ್ಲಿಲ್ಲ. 489 ಮಂದಿ ವಿದ್ಯಾರ್ಥಿ ಸಂಘಗಳ ಮಾಜಿ ನಾಯಕರಾಗಿರುತ್ತಾರೆ.

ಪ್ರಜಾಪ್ರಭುತ್ವ ಚಳುವಳಿಯ ಪರಿಣಾಮವಾಗಿ ಜೈಲುವಾಸ ಅನುಭವಿಸಿದವರು 285 ಮಂದಿಯಿದ್ದರೆ 395 ಪ್ರತಿನಿಧಿಗಳ ಮೇಲೆ ಪೋಲೀಸ್ ಮೊಕದ್ದಮೆಗಳಿದ್ದು ಅತಿ ಹೆಚ್ಚು ಕೇಸುಗಳನ್ನು ಎದುರಿಸುತ್ತಿರುವವರು (21 ಮೊಕದ್ದಮೆಗಳು) ಬಿಹಾರ ರಾಜ್ಯ ಕಾರ್ಯದರ್ಶಿ ಕಾ| ಸುಧೀರ್. ಮೊದಲ ಬಾರಿಗೆ ಅಖಿಲ ಭಾರತ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವವರ ಸಂಖ್ಯೆ 675. ಅತಿ ಚಿಕ್ಕ ವಯಸ್ಸಿನ 8 ಪ್ರತಿನಿಧಿಗಳ ಪೈಕಿ ಕರ್ನಾಟಕದ ಬೀದರ್ ಜಿಲ್ಲೆಯ ಸಂಗಾತಿ ರಾಜೇಶ್ ಸಂಗ್ರಾಮ್ ಒಬ್ಬರು.

ಎಸ್. ಎಫ್. ಐ. ನ ಪದಾಧಿಕಾರಿಗಳು

6ನೇ ಎಸ್. ಎಫ್. ಐ. ಸಮ್ಮೇಳನದಲ್ಲಿ 80 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಈ ಕಾರ್ಯಕಾರಿ ಸಮಿತಿ ಚುನಾಯಿಸಿದ ಪದಾಧಿಕಾರಿಗಳು

ಅಧ್ಯಕ್ಷರು : ವಿಜಯರಾಘವನ್

ಪ್ರ. ಕಾರ್ಯದರ್ಶಿ : ಕಾಂ. ನೀಲೋತ್ಪಲ ಬೋಸ್

ಉಪಾಧ್ಯಕ್ಷರು : ಗೌತಮ್ ದೇಬ್, ಸಮೀರ್ ಚಕ್ರವರ್ತಿ, ವಿ. ಕೃಷ್ಣಯ್ಯ, ಅಶೋಕ್ ಧಾವಲೆ

ಸಹಕಾರ್ಯದರ್ಶಿ : ತಪೋಷ್‌ಬೋಸ್, ಶಿವನ್‌ಕುಟ್ಟಿ, ಅವದೇಶ್ ಕುಮಾರ್ ಪ್ರಮೋದ್ ಪ್ರಧಾನ್,

ಕಾರ್ಯದರ್ಶಿಮಂಡಳಿ ಸದಸ್ಯರು : ಮುಖನ್ ಸಿಂಗ್ ಸಂಧು, ಇನ್ನಾಪೂರ್‌ರಹಮಾನ್, ಎಸ್. ಆರ್. ಅರಾಧ್ಯ.

ಕರ್ನಾಟಕದಿಂದ ಆರ್. ಜಯಕುಮಾರ್‌ರವರ ಜೊತೆಯಲ್ಲಿ ಎಸ್. ವೈ ಗುರುಶಾಂತರವರು ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಎಸ್. ಎಫ್.ಐ. ಸದಸ್ಯತ್ವ ಶುಲ್ಕವನ್ನು 25 ಪೈಸೆ ಯಿಂದ 50 ಪೈಸೆಗೆ ಏರಿಸಲಾಗಿದೆ.

ಮೊದಲ ದಿನದ ರ್‍ಯಾಲಿಗೆ ಭಾಗವಹಿಸಿ ಹಿಂತಿರುಗುತ್ತಿದ್ದ ಕರ್ನಾಟಕದ ವಿದ್ಯಾರ್ಥಿಗಳ ಮೇಲೆ ನಡೆದ ಪೋಲಿಸ್ ಲಾಠಿ ಚಾರ್ಜ್‌ನ ವಿಚಾರ ಸಮ್ಮೇಳನದ ಗಮನಕ್ಕೆ ತಂದಾಗ ಎಲ್ಲಾ ಪ್ರತಿನಿಧಿ ಸಂಗಾತಿಗಳು ಎದ್ದು ನಿಂತು ಪೋಲಿಸ್ ಕೃತ್ಯವನ್ನು ಖಂಡಿಸಿದರು.

ಸಮ್ಮೇಳನದಿಂದ ಸಮ್ಮೇಳನಕ್ಕೆ ದಾಪುಗಾಲು

	ಸದಸ್ಯತ್ವ
ಮೊದಲನೆ ರಾಷ್ಟ್ರ ಸಮ್ಮೇಳನ	1, 23, 624
ಎರಡನೇ ರಾಷ್ಟ್ರ ಸಮ್ಮೇಳನ	1, 62, 491
ಮೂರನೇ ರಾಷ್ಟ್ರ ಸಮ್ಮೇಳನ	4, 12, 706
ನಾಲ್ಕನೇ ರಾಷ್ಟ್ರ ಸಮ್ಮೇಳನ	7, 14, 074

ದಿನ ಒಂದಕ್ಕೆ ಸರಾಸರಿ 400 ವಿದ್ಯಾರ್ಥಿಗಳು ಎಸ್. ಎಫ್.ಐ. ಸದಸ್ಯರಾಗುತ್ತಿದ್ದಾರೆ. ಕೇಂದ್ರ ಸಮಿತಿ ನಿಗಧಿ ಪಡಿಸಿದ್ದ ಗುರಿಯನ್ನು ಮೀರಿ ಆರನೇ ರಾಷ್ಟ್ರ ಸಮ್ಮೇಳನ ಮುನ್ನಡೆ ಸಾಧಿಸಿದೆ.

ಎಲ್ಲಾ ರಾಜ್ಯಗಳಿಗೂ ಹಬ್ಬಿದ ಎಸ್. ಎಫ್. ಐ.

ರಾಜ್ಯಗಳ ಹೆಸರು	1983ರ ಸದಸ್ಯತ್ವ (5ನೇ ರಾಷ್ಟ್ರ ಸಮ್ಮೇಳನ)	1986ರ ಸದಸ್ಯತ್ವ (6ನೇ ರಾಷ್ಟ್ರ ಸಮ್ಮೇಳನ)
ಪಶ್ಚಿಮ ಬಂಗಾಳ	4, 25, 607	5,45, 027
ಕೇರಳ	2, 87, 433	4,68,980
ಮಹಾರಾಷ್ಟ್ರ	1, 03, 193	75,772
ಆಂಧ್ರ ಪ್ರದೇಶ	70, 619	1 09,513
ಅಸ್ಸಾಂ	35, 305	53,308
ತ್ರಿಪುರ	30, 407	45,962
ಬಿಹಾರ್	22, 785	41,017
ಪಂಜಾಬ್	18, 034	13,248
ಉತ್ತರ ಪ್ರದೇಶ	17, 569	9,588
ಮಧ್ಯ ಪ್ರದೇಶ	16, 692	18,665
ಕರ್ನಾಟಕ	15, 644	19,697
ತಮಿಳುನಾಡು	12, 641	27,308
ಒರಿಸ್ಸಾ	12, 441	17,474
ರಾಜಸ್ಥಾನ	11, 495	21,867
ಹಿಮಾಚಲ ಪ್ರದೇಶ	8, 452	14,904
ಹರ್ಯಾಣ	6, 225	6,539
ಗುಜರಾತ್	5, 117	9,016
ದೆಹಲಿ	2, 589	1,948
ಗೋವಾ	1, 163	1,549
ಮಣಿಪುರ	1, 307	1,017
ಜಮ್ಮು ಕಾಶ್ಮೀರ್	129	1087
ಸಿಕ್ಕಿಂ		70
	11, 05, 662	15, 03, 537

ಜಿಲ್ಲಾ ಪರಿಷತ್ ಚುನಾವಣೆ : ಜನತಾ ಪಕ್ಷದ ದ್ವಿಮುಖ ನೀತಿ

ಜನತಾ ಪಕ್ಷದ ಜೊತೆ ಏಕೆ ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಒಪ್ಪಂದವಾಗಲಿಲ್ಲ ಎಂಬುದನ್ನು ಪಕ್ಷ ಈಗಾಗಲೇ ವಿವರಿಸಿದೆ. (ಮೊದಲ ಪುಟ ನೋಡಿ) ಈ ಒಪ್ಪಂದಗಳಿಗೆ ಸಂಬಂಧಿಸಿ ಜನತಾ ಪಕ್ಷದ ರಾಜ್ಯ ನಾಯಕತ್ವ ಹಾಗೂ ಕೆಳಗಿನ ಮಟ್ಟದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಸಮಿತಿಗಳು ಎರಡೆರಡು ರೀತಿಯ ಮಾತನಾಡುತ್ತಿವೆ. ಈ ಬಗ್ಗೆ ರಾಯಚೂರು ಜಿಲ್ಲೆಯ ಜನತಾ ಪಕ್ಷದ ನಾಯಕರು ಅಲ್ಲಿನ ಪಕ್ಷದ ನಾಯಕರುಗಳಿಗೆ ಬರೆದ ಪತ್ರವನ್ನು ಉಲ್ಲೇಖಿಸಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್‌ರವರು ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ.

ರಾಯಚೂರು ಜಿಲ್ಲಾ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿ ಎಂ. ಬಸವನಗೌಡರು ಚಂದ್ರಶೇಖರ ಬಾಳಿಯವರಿಗೆ ಬರೆದ ಪತ್ರ

ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷ ಮಹಾದೇವಪ್ಪ ಗೌಳಿ ಇವರು ತಮಗೆ ಈ ಮೂಲಕ ನಿವೇದಿಸಲು ಹೇಳಿದ ಪ್ರಕಾರ ಕೆಳಗಿನಂತೆ ತಮ್ಮ ಈ ಮೂಲಕ ನಿವೇದಿಸುವುದೇನೆಂದರೆ ಜನತಾ ಪಕ್ಷವು ತಮಗೆ ಪಕ್ಷದೊಂದಿಗೆ ಮೈತ್ರಿ ಪಕ್ಷವಾಗಿದ್ದು ಈ ಪಕ್ಷದ ಹುರಿಯಾಳಾದ ಶ್ರೀಮತಿ ಮೈತ್ರಾ ಪಾಟೀಲ ಇವರಿಗೆ ಮಸರಕಲ್ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಆದೇಶ ನೀಡಿದೆ. ಕಾರಣ ತಾವು ತಮ್ಮ ಹುರಿಯಾಳನ್ನು ಚುನಾವಣಾ ಕಣದಿಂದ ನಿವೃತ್ತರಾಗಲು ಆದೇಶ ನೀಡಿ ಸಹಕರಿಸಿ ಜನತಾ ಪಕ್ಷದ ಹುರಿಯಾಳಿಗೆ ಬೆಂಬಲಿಸಬೇಕಾಗಿ ವಿನಂತಿಸಿಕೊಳ್ಳಲಾಗಿದೆ ಕಾರಣ ತಾವು ಸಹಕರಿಸಬೇಕಾಗಿ ವಿನಂತಿ.

ತಮ್ಮ ವಿಶ್ವಾಸಿಗಳು
ಅಧ್ಯಕ್ಷರ ಆದೇಶದ
ಮೇರೆ

ಎಂ. ಬಸವನಗೌಡ
ಪ್ರಧಾನ ಕಾರ್ಯದರ್ಶಿ
ಜಿಲ್ಲಾ ಜನತಾ ಪಕ್ಷ, ರಾಯಚೂರು

ಜನತಾ ಪಕ್ಷದ ಸ್ಥಳೀಯ ನಾಯಕತ್ವ ಸಿ.ಪಿ.ಐ (ಎಂ) ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಕಾತುರವಾಗಿದ್ದರೂ ರಾಜ್ಯ ನಾಯಕತ್ವ ಯಾವುದೇ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳಬಾರದೆಂದು ನಿರ್ಧರಿಸಿತು.

ಅದಕ್ಕೆ ವಿರುದ್ಧವಾಗಿ, ರಾಯಚೂರು ಜಿಲ್ಲೆಯ ಜನತಾ ನಾಯಕರು ಜಿಲ್ಲೆಯ ಸಿ.ಪಿ.ಐ. (ಎಂ) ನಾಯಕರಿಗೆ ಪತ್ರ ಬರೆದಿದ್ದಾರೆ. ಅಲ್ಲಿಯ ಕೆಲವು ಸ್ಥಾನಗಳಿಂದ ಸಿ.ಪಿ.ಐ.(ಎಂ) ಅಭ್ಯರ್ಥಿಗಳನ್ನು ಹಿಂತೆಗೆದುಕೊಂಡು ಜನತಾ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡಿ ಏಕೆಂದರೆ ನಿಮ್ಮ ಪಕ್ಷದೊಂದಿಗೆ ನಾವು ಯಾವಾಗಲು ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದ್ದೇವೆ ಎಂದು. ಇದು ಸ್ಥಳೀಯ ನಾಯಕತ್ವದ ಭಾವನೆಯನ್ನು ಜನತಾ ಪಕ್ಷದ ರಾಜ್ಯ ನಾಯಕತ್ವ ಬದಿಗೊತ್ತಿದೆ ಎಂದೂ ಹಾಗೂ ಇದು ಚುನಾವಣೆಯ ಫಲಿತಾಂಶಗಳಲ್ಲಿ ಪರಿಣಾಮವಾಗುತ್ತದೆ" ಎಂದು ರಾಮಚಂದ್ರ ರಾವ್ ತಿಳಿಸಿದ್ದಾರೆ.

ಸಿಂಧನೂರು ತಾಲ್ಲೂಕಿನ ಜನತಾ ಅಧ್ಯಕ್ಷ ದೊಡ್ಡನಗೌಡ ಹಾಗೂ ಮಾಜಿ ಶಾಸಕ ಎಂ. ಮಲ್ಲಪ್ಪನವರು ಗಂಗಾಧರ ಕುಷ್ಟಗಿ, ಸಿ. ಪಿ. ಐ. (ಎಂ) ಪ್ರಾದೇಶಿಕ ಸಮಿತಿ ಸದಸ್ಯ ಇವರಿಗೆ ಬರೆದ ಪತ್ರ

ಮಾನ್ಯರೆ,

ಇತ್ತೀಚೆಗೆ, ಈ ವಾರದಲ್ಲಿ ತಮ್ಮ ಪಕ್ಷದ ವತಿಯಿಂದ ರಾಯಚೂರು ಜಿಲ್ಲಾ ಪರಿಷತ್ತಿನ ಚುನಾವಣೆಗೆ, ಸಿಂಧನೂರು ತಾಲ್ಲೂಕಿನ ಜಾಲಿಹಾಳ ಕ್ಷೇತ್ರದಿಂದ, ಸ್ಪರ್ಧಿಸುತ್ತಿರುವುದಾಗಿ ಕರಪತ್ರ 5-12-86 ಮೂಲಕ ತಿಳಿದು ಬಂದಿದೆ.

ನಮ್ಮ ಪಕ್ಷಕ್ಕೆ ನಿಮ್ಮ ಪಕ್ಷವೂ ಮಿತ್ರ ಪಕ್ಷವಾಗಿದ್ದು, ಅಲ್ಲದೇ ನಮ್ಮ ಕಾರ್ಯಕರ್ತರು ಕಳೆದ 1983 ರಿಂದ ಜರುಗಿದ ಅನೇಕ ಚುನಾವಣೆಗಳಲ್ಲಿ ಪರಸ್ಪರ ಸಹಕಾರದಿಂದ ಸ್ನೇಹದಿಂದ ನಡೆದು ಕೊಳ್ಳಲಾಗಿದೆ.

ನಮ್ಮ ರಾಷ್ಟ್ರದಲ್ಲಿ ವ್ಯಕ್ತಿ ನಿಷ್ಠ ಧೋರಣೆಯುಳ್ಳ ಕಾಂಗ್ರೆಸ್ (ಐ) ಪಕ್ಷವನ್ನು ಹಿಮ್ಮೆಟ್ಟಿಸಲು ಮಿತ್ರ ಪಕ್ಷಗಳು ಪರಸ್ಪರ ಕೂಡಿಕೊಂಡು ಸಹಕಾರ ತಿಳಿವಳಿಕೆಯಿಂದ ನಡೆದುಕೊಳ್ಳಬೇಕೆಂದು ತಮಗೇನು ತಿಳಿಯಲಾರದ ಸಂಗತಿಯಲ್ಲ.

ಪ್ರಯುಕ್ತ, ಜಾಲಿಹಾಳ ಕ್ಷೇತ್ರಕ್ಕೆ ತಾವು ತಮ್ಮ ಪಕ್ಷದ ಅಭ್ಯರ್ಥಿಯನ್ನು ನಿಲ್ಲಿಸದಿದ್ದರೆ ಹಾಗೂ ತಮ್ಮ ಪಕ್ಷದ ಕಾರ್ಯಕರ್ತರು ಈ ಚುನಾವಣೆಯಲ್ಲಿ ನಮಗೆ ಸಹಾಯ ಮಾಡಿದಲ್ಲಿ ಮಾತ್ರ ನಮಗೆ ಜಯ ಸುಲಭ. ಇಲ್ಲವಾದರೆ ಅಪ್ರತ್ಯಕ್ಷವಾಗಿ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಾಗುವುದು.

ಕಾರಣ ಈ ವಿಷಯದಲ್ಲಿ ನಮಗೆ ಸಹಕರಿಸಬೇಕಾಗಿ ವಿನಂತಿ.

ತಮ್ಮ ವಿಶ್ವಾಸಿ,
ಶ್ರೀ ಎಂ. ಮಲ್ಲಪ್ಪ, ಮಾಜಿ ಶಾಸಕ
ಎನ್. ದೊಡ್ಡನಗೌಡ
ಅಧ್ಯಕ್ಷರು,
ಜನತಾ ಪಕ್ಷ ಸಿಂಧನೂರು

ಈಗ ಜನತಾ ನಾಯಕರುಗಳು ಬರೆದಿರುವ ಪತ್ರಗಳನ್ನೇ ಓದಿ :

ವಿವಿಧ ಜಿಲ್ಲೆಗಳಲ್ಲಿ ಪಕ್ಷದ ಅಭ್ಯರ್ಥಿಗಳು

ಬೆಂಗಳೂರು ಜಿಲ್ಲೆ

ದೊಡ್ಡಬಳ್ಳಾಪುರ ತಾಲ್ಲೂಕು.
ಕನಸವಾಡಿ : ಬಿ. ಕೆ. ರಾಘಮ್ಮ
ಅಣಬೆ : ಸಿ. ವೆಂಕಟರಾಮಯ್ಯ.
ಹೊಸಕೋಟೆ ತಾಲ್ಲೂಕು
ಅನಗೊಂಡನಹಳ್ಳಿ ಮೀಸಲು : ಟಿ. ಮುನಿಸ್ವಾಮಿ

ಗುಲ್ಬರ್ಗಾ ಜಿಲ್ಲೆ

ಆಳಂದ ತಾಲ್ಲೂಕು
ಚಿಂಚ ಹಲಸೂರು ಮೀಸಲು : ಮಾರುತಿ ಮಾನ್ಪಡೆ.
ಬೆಳಂಬಿ : ಬೆಂಬಲಿತ ಅಭ್ಯರ್ಥಿ
ಗುಲ್ಬರ್ಗಾ ತಾಲ್ಲೂಕು
ಕುಸನೂರು : ಶಾಂತ ವೀರಯ್ಯ
ಫರ್ತಾಬಾದ್ : ಶ್ರೀಮತಿ ಮಹದೇವಿ
ಚಿತಾಪುರ ತಾಲ್ಲೂಕು
ಬಂಕೂರಾ ಮೀಸಲು : ಫಾಳಪ್ಪ
ಜೇವರ್ಗಿ ತಾಲ್ಲೂಕು : ಮರಿಯಪ್ಪ

ತುಮಕೂರು ಜಿಲ್ಲೆ

ತುಮಕೂರು ತಾಲ್ಲೂಕು
ಕೋರಾ : ಶ್ರೀನಿವಾಸ್
ಗುಬ್ಬಿ ತಾಲ್ಲೂಕು
ಹಾಗಲವಾಡಿ : ಎಚ್. ಸಿ. ಚನ್ನಪ್ಪ

ದ. ಕ. ಜಿಲ್ಲೆ

ಕುಂದಾಪುರ ತಾಲ್ಲೂಕು
ಕೋಟೇಶ್ವರ : ಸೂರ್ಯಕಾಂತ (ಬೆಂಬಲಿತ)
ಉಡುಪಿ ತಾಲ್ಲೂಕು
ಕಲ್ಯಾಣಪುರ : ಡೇವಿಡ್ ಕರ್ಕಡ
ಬಂಟ್ವಾಳ ತಾಲ್ಲೂಕು
ಗೋಳಿ ಮಜಲು : ಬಿ. ನಾರಾಯಣ
ಮಂಗಳೂರು ತಾಲ್ಲೂಕು
ಉಳ್ಳಾಲ : ಜನಾರ್ಧನ ನಾಯಕ್
ಕೋಟೆ ಕಾರ್ : ರಾಮಚಂದ್ರ ಉಚ್ಚಿಲ್
ಹರೇಕಳ : ಮಾರಪ್ಪ (ಬೆಂಬಲಿತ)
ಸುಳ್ಯ ತಾಲ್ಲೂಕು
ಸುಳ್ಯ : ಕೆ. ಸೂರ್ಯನಾರಾಯಣ ಭಟ್
ಗುತ್ತಿಗಾರ್ : ಬಾಲಕೃಷ್ಣಗೌಡ
ಬೆಳ್ತಂಗಡಿ ತಾಲ್ಲೂಕು
ಧರ್ಮಸ್ಥಳ : ನಾರಾಯಣ, ಮಲೆಕುಡಿಯ

ಮೈಸೂರು ಜಿಲ್ಲೆ

ಮೈಸೂರು ತಾಲ್ಲೂಕು
ಸಿದ್ದಲಿಂಗಾಪುರ : ದೇವಯ್ಯ
ಹುಣಸೂರು ತಾಲ್ಲೂಕು
ಹಣಗೋಡು : ಅಣ್ಣಪ್ಪ
ಹೆಗ್ಗಡೆ ದೇವನಕೋಟೆ ತಾಲ್ಲೂಕು
ಹೆಗ್ಗಡ ದೇವನಕೋಟೆ : ನಟರಾಜಗೌಡ

ರಾಯಚೂರು ಜಿಲ್ಲೆ

ರಾಯಚೂರು ಜಿಲ್ಲೆ
ಕಲ್ಮಲಾ : ಚಂದ್ರಶೇಖರ ಬಾಳಿ
ರಾಂಪುರ : ಸಿ. ನರಸಪ್ಪ
ಯರಗೇರಾ : ಲಿಂಗಪ್ಪ ಪೂಜಾರ್
ಮಾನ್ವಿ ತಾಲ್ಲೂಕು
ಸಿರಿವಾರ : ಡಾ|| ಭಾಲಚಂದ್ರ
ಯಲಬುರ್ಗಾ : ಎಸ್. ಮಂಜುಳಾ
ಕುಷ್ಟಗಿ : ಆರ್. ಕೆ. ದೇಸಾಯಿ

ಕೋಲಾರ ಜಿಲ್ಲೆ

ಚಿಂತಾಮಣಿ ತಾಲ್ಲೂಕು
ಯಗವಕೋಟೆ : ಜಿ. ವಿ. ಅಶ್ವಥನಾರಾಯಣರೆಡ್ಡಿ
ಏನಿಗದಲೆ : ಗಂಗಪ್ಪ
ಕಸಬ : ರತ್ನಮ್ಮ
ಕೈವಾರ : ನಾರಾಯಣಪ್ಪ
ದೊಡ್ಡಗಂಜೆ : ಶಾಂತಮ್ಮ
ಬಾಗೆಪಲ್ಲಿ ತಾಲ್ಲೂಕು
ಮಿಟ್ಟೇಮರಿ : ಜಿ. ವಿ. ಶ್ರೀರಾಮರೆಡ್ಡಿ
ಗೂಳೂರು : ಗಂಗಲಪ್ಪ
ಚೇಳೂರು : ವೆಂಕಟರೆಡ್ಡಿ
ಕಸಬ : ರೇಣಮ್ಮ
ಗುಡಿಬಂಡೆ : ಚೆನ್ನಪ್ಪಯ್ಯ
ಸೋಮೇನಹಳ್ಳಿ : ಆರ್. ನರಸಿಂಹಯ್ಯ

ಮಿಲ್ ಮಾಲೀಕರ ಪರವಾದ ಸಕ್ಕರೆ ನೀತಿ– ಎಐಕೆಎಸ್ ಖಂಡನೆ

ತನ್ನ ಮಿಲ್ ಮಾಲೀಕ ಪರ ಧೋರಣೆಗಳ ಫಲವಾಗಿ ಉಂಟಾಗಿರುವ ಸಕ್ಕರೆ ಉದ್ಯಮದ ಬಿಕ್ಕಟ್ಟನ್ನು ಪರಿಹರಿಸುವ ನೆಪದಲ್ಲಿ ಕಳೆದ ವರ್ಷ ಪ್ರಕಟಿಸಿದ ಹೊಸ ಸಕ್ಕರೆ ನೀತಿ ಲೆವಿ ಸಕ್ಕರೆಯ ಪ್ರಮಾಣವನ್ನು 65% ದಿಂದ 55% ಕ್ಕಿಳಿಸಿ ಬೆಲೆಯನ್ನು ಹೆಚ್ಚಿಸಿ ಸುಮಾರು 390 ಕೋಟಿ ರೂ.ಗಳನ್ನು ಮಿಲ್‌ಮಾಲೀಕರ ಜೇಬಿಗಿಳಿಸಿತ್ತು. ಈ ಬಾರಿ ಇದನ್ನು 50% ಕ್ಕಿಳಿಸಿ, ಬೆಲೆಯನ್ನು 5 ಪೈಸೆ ಏರಿಸಿ ಮತ್ತೆ ನೂರು ಕೋಟಿ ರೂ.ಗಳನ್ನು ಮಾಲೀಕರ ಜೇಬಿಗೆ ಸೇರಿಸಿದೆ.

ಇದಕ್ಕೆ ಪ್ರತಿಯಾಗಿ ಕಬ್ಬು ಬೆಳೆಗಾರರಿಗೆ ನೀಡಿದ ಹೆಚ್ಚಳ ಕ್ವಿಂಟಾಲ್‌ಗೆ 50 ಪೈಸೆ. ಈ ಹೆಚ್ಚಳ ಕಳೆದ ವರ್ಷಕ್ಕೆ ಹೋಲಿಸಿದರೆ ಕೇವಲ 3% ಆದರೆ ಈ ಅವಧಿಯಲ್ಲಿ ಸಗಟು ಬೆಲೆಗಳಲ್ಲಾಗಿರುವ ಹೆಚ್ಚಳ 6% ಕ್ಕೂ ಹೆಚ್ಚು ಹಾಗೂ ಸಕ್ಕರೆ ಬೆಲೆಯಲ್ಲಾಗಿರುವ ಹೆಚ್ಚಳ 25% ಇತರ ಮುಖ್ಯ ಕಬ್ಬು ಬೆಳೆಯುವ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ಅಧಿಕಾರದಲ್ಲಿರುವುದರಿಂದ ಅವುಗಳು ಇದೇ ರೀತಿಯಲ್ಲಿ ಬೆಲೆ ನಿಗದಿ ಮಾಡುವ ಸಂಭವವಿದ್ದು ಈ ನಾಚಿಕೆಹೀನ ಮಿಲ್ ಮಾಲೀಕ-ಪರ ನೀತಿಯ ವಿರುದ್ಧ ಇತರ ಕಿಸಾನ್ ಸಂಘಟನೆಗಳೊಂದಿಗೆ ಸಂಪರ್ಕ ಬೆಳೆಸಿ, ಒಗ್ಗಟ್ಟಾಗಿ ಪ್ರತಿಭಟಿಸಬೇಕೆಂದು ಕಿಸಾನ್ ಸಭಾ ಅಧ್ಯಕ್ಷ ಕಾ. ಗೋದಾವರಿ ಪರುಳೇಕರ್ ಹಾಗೂ ಪ್ರಧಾನ ಕಾರ್ಯದರ್ಶಿ ಕಾಂ. ಶಂಕರಯ್ಯ ಕರೆ ನೀಡಿದ್ದಾರೆ.

ದುಡಿದುಣ್ಣುವನೊಬ್ಬನ ಪರದಾಟ–ಹುಡುಕಾಟ

ನನ್ನ ಇಂದಿನ ಸಂಕಟಕ್ಕೆ ಕಾರಣರಾರು?

ಘನ ಕರ್ನಾಟಕ ಸರಕಾರದಲ್ಲಿ ದುಡಿಯುವ ಲಕ್ಷಾಂತರ ಜನರಲ್ಲಿ ನಾನೊಂದು ಬಿಡಿ ಗಾಸು. ಬೆಲೆ ಕಳೆದು ಕೊಂಡಿರುವ ಅನೇಕ ನಾಣ್ಯಗಳಂತೆ ನನ್ನ ದುಡಿಮೆಯೂ ಬೆಲೆ ಕಳೆದು ಕೊಂಡಿದೆ. ಕಾಣೆಯಾಗಿರುವ ಒಂದು ಪೈಸೆ, ಎರಡು ಪೈಸೆಗಳಂತೆ ನಾನೂ ಒಂದು ದಿನ ಇದ್ದಕ್ಕಿದ್ದಂತೆ ಕಾಣೆ ಯಾಗುವೆನೊ ಎಂಬ ಭಯ ನನ್ನನ್ನು ಆವರಿಸಿದೆ. ಈಗಂತೂ ನನ್ನ ಬಾಳು ಹಲ ಜನರ ಕೈಯಲ್ಲಿ ಸಿಕ್ಕಿ ನಲುಗಿ ಹೋದ, ರೂಪಾಯಿ ನೋಟಿನಂತಾ ಗಿದೆ. ತಿಂಗಳಿಗೆ ನಾನೂರು ರೂಪಾಯಿ ಪಡೆಯುವ ಒಬ್ಬ ಹಂಗಾಮಿ ನೌಕರನ ಕಥೆ ಇನ್ನೇನಾಗಲು ಸಾಧ್ಯ.

ನನ್ನ ಹೊಟ್ಟೆ ತುಂಬಿಸಿಕೊಳ್ಳು ವುದು ಹೇಗೆ? ಊರಿನಲ್ಲಿರುವ ನನ್ನ ನಮ್ಮ ತಂಗಿಯರ ಶಿಕ್ಷಣ ಹೇಗೆ? ಇದ್ದಕ್ಕಿಂದ್ದಂತೆ ಎಲ್ಲಾ ಹೋಟೆಲು ಗಳಲ್ಲಿ ಕಾಫಿ ನೀಡುವ ಲೋಟಗಳ ಗಾತ್ರ ಸಣ್ಣದಾಗಿದೆ. ಅದೇ ಸಮಯ ದಲ್ಲಿ ಬೆಲೆ ಹತ್ತುಪೈಸೆ, ಇಪ್ಪತ್ತುಪೈಸೆ ಏರಿದೆ. ಊಟದ ಬೆಲೆ ಹೆಚ್ಚಾಗಿದೆ. ಅನ್ನ ನೀಡುವ, ಮೊಸರು ನೀಡುವ ಬಟ್ಟಲಿನ ಗಾತ್ರ ಸಣ್ಣದಾಗಿದೆ. ದಿನವೂ ನೀಡುತ್ತಿದ್ದ ಎರಡು ಪಲ್ಯ ಗಳಲ್ಲಿ ಒಂದು ಪಲ್ಯ ಮಾಯವಾಗಿದೆ. ಮೊದಲೇ ಅರೆಹೊಟ್ಟೆಯ ಕೊಡುತ್ತಿದ್ದ ಇವರು ಈಗ ಕಾಲುಹೊಟ್ಟೆಯ ಊಟ ಕೊಡುತ್ತಿದ್ದಾರೆ.

ಎರಡೆರಡು ರೀತಿಯ ಬೆಲೆ ಏರಿಕೆಯ ಧಾಳಿಗೆ ತುತ್ತಾಗಿದ್ದೇನೆ. ಒಂದು ನೇರ ಬೆಲೆ ಎರಿಕೆ 4ರೂ ಊಟದ ಬೆಲೆ 5–50 ಆಗಿದ್ದು ಮತ್ತೊಂದು ಮುಚ್ಚಿದ್ದ ಬೆಲೆ ಏರಿಕೆ ಕಾಫಿ, ಅನ್ನ ಇತ್ಯಾದಿಗಳ ಪ್ರಮಾಣದ ಕಡಿಮೆ ಯಾಗಿದ್ದು ಬೆಲೆ ಏರಿತಷ್ಟೇ ಹೊರತು ನನ್ನ ಸಂಬಳವಂತೂ ಒಂದುಪೈಸೆಕೂಡ ಹೆಚ್ಚಲಿಲ್ಲ. ಕೊನೆಗೆ ವೆಚ್ಚ ಸರಿತೂಗಿ ಸಲು ಊರಿಗೆ ಕಳುಹಿಸುವ ಹಣದಲ್ಲಿ ಖೋತಾ ಮಾಡಲು ಪ್ರಯತ್ನಿಸಿದೆ. ಕ್ರಮವಾಗಿ ಹಣ ಕಳುಹಿಸುತ್ತಿದ್ದವನಿಗೆ ಈಗ ಒಮ್ಮೊಮ್ಮೆ ಸ್ವಲ್ಪ ಹಣಕಳು ಹಿಸುವುದೂ ಸಾಧ್ಯವಾಗುವುದಿಲ್ಲ. ಊರಿ ನಲ್ಲಿ ನಮ್ಮ ಮನೆಯವರ ಪತ್ರಗಳು ಕೂಡಾ ಹಾಗೇ ಅಕ್ಕಿ, ಎಣ್ಣೆ, ಸೀಮೆಯೆಣ್ಣೆ ಇತ್ಯಾದಿ ಎಲ್ಲಾ ವಸ್ತು ಗಳ ಬೆಲೆ ಏರಿದ್ದರ ಬಗ್ಗೆ ತಿಳಿಸುತ್ತಾ ಇದೆ. ಹಣ ಕಡಿಮೆಯಾದದ್ದರ ಬಗ್ಗೆ ಒಂದು ರೀತಿಯ ಅಸಮಧಾನ, ಬೇಸರ ಕಾಣಿಸುತ್ತಿದೆ. ಒಂದು ಕಡೆ ನನ್ನ ಅಗ ತ್ಯಗಳ ಖೋತಾ ಮಾಡಿಕೊಂಡರೂ, ಪತ್ರಿಕೆ ಓದುವುದು, ಸಿನೆಮಾ ಕೈ ಬಿಟ್ಟರೂ ತಕ್ಕಡಿ ಸರಿದೂಗುತ್ತಿಲ್ಲ. ಇದೇನು ಹೀಗಾಯಿತು ಎಂಬ ಯೋಚನೆ ನನ್ನನ್ನು ಬಾಧಿಸಲಾರಂಭಿ ಸಿತು? ಇದಕ್ಕೆ ಯಾರು ಕಾರಣರು? ಎಂದು ಮನಸ್ಸು ಬೆದಕಲಾರಂಭಿಸಿತು.

ಮೊದಮೊದಲು ಹೋಟೆಲ್ ಮಾಣಿಯ ಮೇಲೆ ಸಿಡಿಮಿಡಿಗೊಂಡೆ. ಆದರೆ ಪಾಪ! ಅವನೇನು ಮಾಡಬಲ್ಲ. ಹೋಟೆಲ್ ಮಾಲೀಕರ ಲಾಭಕೋರ ತನವೇ ಇದಕ್ಕೆ ಕಾರಣವೆಂದು ಹಿಡಿ ಶಾಪ ಹಾಕಿದೆ. ಹೌದು, ಹೋಟೇಲ್ ಮಾಲೀಕರಲ್ಲಿ ಲಾಭಕೋರತನವೇನೊ ತುಂಬಿ ತುಳುಕುತ್ತಿದೆ. ಆದರೆ ಎಲ್ಲಾ ವಸ್ತುಗಳ ಬೆಲೆಯೂ ಏರಿದೆಯಲ್ಲ ಅದಕ್ಕೆ ಯಾರು ಕಾರಣರು? ಹಾಗಾದರೆ ಹೋಟೆಲ್ ಮಾಲೀಕರು ಹಾಗೂ ದಿನಸಿ ಅಂಗಡಿ ವ್ಯಾಪಾರಿಗಳು ಒಟ್ಟಾಗಿ ಇದನ್ನು ಮಾಡಿರಬಹುದೇ? ಹಾಗಾದರೆ ಬಸ್ ದರ, ಸಿನೆಮಾ ದರ, ಹಾಲು ಎಲ್ಲಾ ವಸ್ತುಗಳ ಬೆಲೆಯೂ ಏರಿವೆಯಲ್ಲ.

ಹೀಗೆ ಯೋಚಿಸುತ್ತಿರುವಾಗಲೇ ರೇಡಿಯೋದಲ್ಲಿ ವಾರ್ತಾಪ್ರಸಾರ "ಲೋಕಸಭೆಯಲ್ಲಿ ಇಂದು ಕೇಂದ್ರ ಸರಕಾರದ ಸಂಪರ್ಕ ಖಾತೆ ಸಚಿವರು ಅಂಚೆ ದರಗಳ ಏರಿಕೆ ಮಾಡುವುದು ಅನಿವಾರ್ಯವಾಗಿದೆಯೆಂದು ಘೋಷಿಸಿ ದರು. ಈಗ ಅಂಚೆ ಕಾರ್ಡಿನಿಂದ ಅಂತರ್ದೇಶೀಯ ಪತ್ರಗಳಿಂದ ಸರಕಾರಕ್ಕೆ ಹತ್ತಾರು ಕೋಟಿರೂಗಳ ನಷ್ಟವಾಗುತ್ತಿದೆಯೆಂದೂ ಅದನ್ನು ಭರಿಸಲು ಕಾರ್ಡಿನ ದರ, ಫೋನಿನ ದರ ಏರಿಕೆ ಮಾಡದೆ ವಿಧಿಯೇ ಇಲ್ಲವೆಂದು ತಿಳಿಸಿದರು." ಆದರ ಜೊತೆಗೆ, ಈ ಬೆಲೆ ಏರಿಕೆಯನ್ನೂ ಸಿ.ಪಿ.ಐ.(ಎಂ.) ಸದಸ್ಯರು ಖಂಡಿಸಿದರು. ಲೋಕಸಭೆಯ ಎಲ್ಲಾ ವಿರೋಧ ಪಕ್ಷಗಳೂ ಈ ಬೆಲೆ ಏರಿಕೆ ಯನ್ನು ವಿರೋಧಿಸಿ ಸಭಾತ್ಯಾಗ ಮಾಡಿದವು ಎಂಬ ಸುದ್ದಿ ಕೂಡಾ ನನ್ನ ಪ್ರಜ್ಞೆಯನ್ನು ತಟ್ಟಿತು.

ಈ ಅಂಚೆ, ತಂತಿ, ಫೋನ್ ದರ ಏರಿಕೆಯೊಂದಿಗೇ ಕೇಂದ್ರ ಸರಕಾರ ಎರಡು ಮೂರು ವರ್ಷಗಳಿಂದ ಮಾಡಿದ ಎಲ್ಲಾ ಬೆಲೆ ಏರಿಕೆಗಳೂ ತಟ್ಟನೆ ನನ್ನ ನೆನಪಿಗೆ ಬಂತು. ಇಡೀ ದೇಶದಲ್ಲಿ ಈ ಬೆಲೆ ಏರಿಕೆಯನ್ನು ವಿರೋಧಿಸಿ ಬಂದ್ ಆದದ್ದು ಆದಿನ ಕರ್ನಾಟಕ ಸರಕಾರ ರಜಾ ಘೋಷಿಸಿ ದ್ದೆಲ್ಲಾ ಕಣ್ಣಮುಂದೆ ನಿಂತಿತು. ಆದರೆ ಆದರ ಜೊತೆಜೊತೆಯಲ್ಲಿಯೇ ಕರ್ನಾಟಕ ಸರಕಾರ ಬಸ್‌ದರ, ಹಾಲು ವಿದ್ಯುತ್ ದರದ ಬೆಲೆ ಏರಿಸಿತಲ್ಲ.

ಕರ್ನಾಟಕ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ ಹೀಗೆ ಬೆಲೆ ಏರಿಸಲು ಕಾರಣವೇನು? ಜನರಿಂದಲೇ ಆಯ್ಕೆಯಾಗಿ ಜನಕ್ಕೆ ಉಪಕಾರ ಮಾಡುವ ಬದಲು ಅಪಕಾರವೆಸಗಲು ಕಾರಣವೇನು? ಇದರಿಂದ ಯಾರಿಗೆ ಲಾಭ?

ಸರಿ ಇದಕ್ಕೆ ಕಾರಣವೇನು? ನೀವೇಕೆ ಬೆಲೆ ಏರಿಸಿದಿರಿ? ಎಂಬುದಕ್ಕೆ ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆ ಹೇಳುತ್ತಾರೆ: ಕೇಂದ್ರ ಸರಕಾರ ರಾಜ್ಯಗಳಿಗೆ ನೀಡುತ್ತಿದ್ದ ಓವರ್ ಡ್ರಾಫ್ಟ್ ಸೌಲಭ್ಯ ಪೂರ್ಣವಾಗಿ ಕಡಿತ ಮಾಡಿದೆ. ಹಿಂದೆ ರಾಜ್ಯ ಸರಕಾರದಲ್ಲಿ ತಕ್ಷಣಕ್ಕೆ ಹಣವಿಲ್ಲ ದಿದ್ದರೂ ಮೊದಲು ರಿಸರ್ವ್ ಬ್ಯಾಂಕ್ ನಿಂದ ಹಣಪಡೆದು ಬರಗಾಲ ಪರಿಹಾರ ಕಾಮಗಾರಿ ವೆಚ್ಚವಾಗಲೀ ಸರಕಾರದ ಯಾವುವೇ ವೆಚ್ಚವಾಗಲೀ ಸರಿತೂಗಿಸ ಬಹುದಿತ್ತು. ಆದರೆ ಅದನ್ನೂ ದಿಢೀರನೇ ಕಡಿತಮಾಡಿದ್ದರಿಂದ ನಮ್ಮ ವೆಚ್ಚ ಸರಿತೂಗಿಸಬೇಕಾದರೆ ನಮ್ಮ ಕೈಯಲ್ಲಿರುವ ವಸ್ತುಗಳ ಬೆಲೆ ಏರಿಸ ಬೇಕು ಇಲ್ಲವೇ ಸರಕಾರದ ವೆಚ್ಚ ಕಡಿಮೆ ಮಾಡಬೇಕು. ಅಂದರೆ ಸರ್ಕಾರಿ ನೌಕರರ ಸಂಬಳ ಹೆಚ್ಚಿಸು ವುದಕ್ಕೆ ಹಣವಿಲ್ಲ. ಖಾಲಿಹುದ್ದೆಗಳನ್ನು ಭರ್ತಿಮಾಡುವುದಕ್ಕೆ ಹಣವಿಲ್ಲ ಎಂದು ಹೇಳುತ್ತಾರೆ.

ಅಂದರೆ ನನ್ನ ಸಂಬಳ ಹೆಚ್ಚುವುದಿಲ್ಲ ನನ್ನ ಕೆಲಸ ಖಾಯಂ ಆಗುವುದಿಲ್ಲ. ಅಷ್ಟೇಅಲ್ಲ ನನ್ನ ನೌಕರಿಯೇ ಹೋಗ ಬಹುದು ಏಕೆಂದರೆ ಸರ್ಕಾರಿವೆಚ್ಚ ಕಡಿಮೆಮಾಡಲು ಎಲ್ಲಾ ಹಂಗಾಮಿ ನೌಕರರನ್ನೇ ತೆಗೆಯ ಬೇಕೆಂದಿದ್ದಾರಂತೆ.

ಕೇಂದ್ರ ಸರ್ಕಾರಕ್ಕೇನು ಬಂದಿದೆ? ರಾಜ್ಯ ಸರ್ಕಾರಗಳಿಗೆ ಹಣ ನೀಡುವು ದಕ್ಕೆ ಏನಾಗಿದೆ. ರೈಲ್ವೆದರ, ಪೆಟ್ರೋಲ್ ದರಏರಿಸಿದ್ದರಿಂದ ಅವರಿಗೆ ಬಂದ ಎರಡು ಮೂರುಸಾವಿರ ಕೋಟಿ ಹಣ ಏನಾಯಿತು. ನಮ್ಮ ಬೆವರು ಹರಿಸಿ ದುಡಿದದ್ದರಿಂದಲ್ಲವೇ ಈ ತೆರಿಗೆಗಳನ್ನು ತೆತ್ತದ್ದು. ಈ ಹಣವನ್ನು ರಾಜ್ಯ ಸರ್ಕಾರಕ್ಕೆ ಅವರು ಯಾಕೆ ನೀಡು ವುದಿಲ್ಲ? ಇದರಿಂದ ನನ್ನ ನೌಕರಿ ಖಾಯಂ ಆದರೆ ಸ್ವಲ್ಪವಾದರೂ ನನ್ನ ಪರಿಸ್ಥಿತಿ ಉತ್ತಮವಾದೀತು. ನೋಡಿ ನಮ್ಮ ಕಛೇರಿಯಲ್ಲಿಯೇ ಕೆಲಸ ಮಾಡುವ ಅನೇಕ ಜನ ನನಗಿಂತ ಕಡಿಮೆ ಕೆಲಸಮಾಡಿದರೂ ಖಾಯಂ ನೌಕರರಾದುದರಿಂದ ನನಗಿಂತ ಎರಡು ಪಟ್ಟು ಹೆಚ್ಚು ಸಂಬಳ ಪಡೆಯುತ್ತಾರೆ. ಬೆಲೆ ಏರಿಕೆಯಿಂದ ಅವರಿಗೂ ತಾಪತ್ರಯ ಇದೆ ಹೆಂಡತಿ ಮಕ್ಕಳ ಸಂಸಾರದ ಖರ್ಚನ್ನು ನಿಭಾ ಯಿಸುವುದು ಕಷ್ಟ. ಆದರೆ ಈ ದೆಹಲಿ ಸರ್ಕಾರ ಅವರಿಗೆ ಬೆಲೆ ಏರಿಕೆ ಹೆಚ್ಚಾ ದಂತೆ ತುಟ್ಟಿ ಭತ್ಯ ಹೆಚ್ಚು ಮಾಡಲು ಹಣವನ್ನು ನೀಡವುದಿಲ್ಲ. ನನ್ನ ನೌಕರಿ ಖಾಯಂ ಆಗಲೂ ಹಣ ನೀಡುವುದಿಲ್ಲ. 21ನೆಯ ಶತಮಾನಕ್ಕೆ ನಾವು ಹೋದಾಗ ಸುಖದ ಸುಪ್ಪತ್ತಿಗೆಯಲ್ಲಿ ರುತ್ತೇವೆ ಎಂದು ಹೇಳುತ್ತಾರಲ್ಲಾ ರಾಜೀವ್ ಗಾಂಧಿಯವರು ಅದನ್ನು ಈಗಲೇ ಯಾಕೆ ಮಾಡಬಾರದು? ಸಾವಿರ ಸಾವಿರ ಕೋಟಿ ಹಣ ಎಲ್ಲಿ ಹೋಗುತ್ತಿದೆ, ದಿನವೂ ಪೇಪರ್‌ನಲ್ಲಿ ಬರುತ್ತಲೇ ಇದೆಯಲ್ಲ ಟಿವಿ ತಯಾರಿಕ ರಿಗೆ ವಿನಾಯಿತಿ ಇದನ್ನ ಆಮದು ಮಾಡುವವರಿಗೆ ಸಹಾಯಧನ ಎಂದು ನಮ್ಮ ರಕ್ತ ಸುಟ್ಟು ಸಂಪಾದನೆ ಮಾಡಿದ ಹಣ ಸರ್ಕಾರ ಏರಿಸಿದ ಬೆರೆ ಗಳಿಗೆ ಆಹಾರವಾಗುತ್ತದೆ ಆ ಸರ್ಕಾರ ಅದನ್ನು ಕೈಗಾರಿಕೆಗಳ ಮಾಲೀಕರಿಗೆ ದಾನ ಮಾಡುತ್ತಿದೆಯಂತೆ ಕುರಿ ಯನ್ನು ಕೊಂದು ತೋಳನಿಗೆ ಕೊಟ್ಟ ಹಾಗೆ. ಈಗ ಅರ್ಥವಾಯಿತು ನನಗೆ 21ನೇ ಶತಮಾನಕ್ಕೆ ಹೇಗಾಗುವುದು ಎಂದರೆ ಏನು ಎಂದು, ನನ್ನ ದುಡಿಮೆಗೆ ಕಲ್ಲುಹಾಕಿ ಬೆಲೆ ಏರಿಸಿ ನಾನು ಉಪ ವಾಸ ವನವಾಸ ಮಾಡುವಂತೆ ಮಾಡು ವುದೇ ಈ ಹೊಸ ಆರ್ಥಿಕ ನೀತಿ, ಇದೇ ರಾಜೀವ್ ಗಾಂಧಿಯವರ ಕನಸು ಎಂದು.

ಜನತಾ ಸರ್ಕಾರವಾದರೂ ಕೇಂದ್ರ ಸರ್ಕಾರ ಹೇಳಿದಂತೆ ಕುಣಿದು ಬಸ್ ಧರ ಏರಿಸುವ ಬದಲು ಘಟ್ಟಿಸಿ "ಹೆಚ್ಚು ಹಣ ಕೊಡಿ" ಎಂದು ಕೇಳಬಾರದೆ? ಅದು ಅವರ ಜವಾಬ್ದಾರಿ ಎಂದು ಕೈ ತೊಳೆದುಕೊಂಡು ಕುಳಿತರೆ ಆಯಿತೇ? ನನ್ನನ್ನು ನನ್ನ ಗೆಳೆಯರನ್ನು ನೌಕರಿ ಯಿಂದ ತೆಗೆಯುವುದಕ್ಕೆ ಮಾತ್ರ ಸರಾಗವಾಗಿ ಕೈ ಓಡುತ್ತದೆ ಇವರಿಗೆ. ಇವರೆಲ್ಲರೂ ಒಂದೇ ಜಾತಿಗೆ ಸೇರಿದ ವರು ಎಂಬುದಂತೂ ಕಣ್ಣಿಗೆ ಹೊಡೆ ದಂತೆ ಕಾಣುತ್ತದೆ. ನನ್ನ ಕಣ್ಣ ತುಂಬ ತುಂಬಿದ್ದ ಪೊರೆ ಹರಿಯುತ್ತದೆ.

ಕಷ್ಟಗಳ ಈ ಸಾಗರದಲ್ಲಿ ನನ್ನಂತೆಯೇ ತೇಲಲಾಗದೆ, ಒದ್ದಾಡುತ್ತಿರು ವವರು ನನ್ನ ಸುತ್ತ ಎಲ್ಲೆಲ್ಲೂ ಕಾಣ ಸಿಗುತ್ತಾರೆ. ನನಗಿಂತಲೂ ಅಧೋಗತಿ ಯಲ್ಲಿರುವವರನ್ನು ಕಾಣುತ್ತೇನೆ ತಲೆ ಯ ಮೇಲೊಂದು ಸುರಿಲ್ಲದೆ ಚಳಿಮಳೆ ಬಿಸಿಲೆನ್ನದೆ ಬಯಲೆ ಮನೆಯಾಗಿರುವ ವರು ಕೂಲಿ ಮಾಡಿ ಬದುಕುವವರ ಪಾಡೇನು?

ನಾವೆಲ್ಲ ಒಂದಾಗಿ ರಾಮಕೃಷ್ಣ ಹೆಗ್ಗಡೆಯವರನ್ನು ರಾಜೀವ್‌ಗಾಂಧಿ ಯವರನ್ನು ಏಕೆ ಕೇಳಬಾರದು? ನಮ್ಮ ಬದುಕನ್ನೇಕೆ ಬಿಡಿಗಾಸಿಗೂ ಕಡೆಯಾಗಿ ಮಾಡಿದ್ದೀರಿ ಎಂದು.

ಜನ ಸಮುದಾಯವನ್ನು ಸುಡುತ್ತಿರುವ ಬೆಲೆಗಳು, ಕುಸಿದ ರೂಪಾಯಿ ಬೆಲೆ, ತಗ್ಗಿದ ಆದಾಯ ಇವುಗಳ ನಡುವೆ ಕಂದರ ದಿನದಿನಕ್ಕೂ ವಿಸ್ತಾರವಾಗುತ್ತಾ ನಡೆದಿದೆ. ರಾಜೀವ ಗಾಂಧಿಯವರು 21ನೇ ಶತಮಾನಕ್ಕೆ ಹಾಕುವ ಕನಸಿನೆಡೆಯಲ್ಲಿ ಕೋಟ್ಯಾಂತರ ಬಡಪಾಯಿಗಳ ಕನಸುಗಳು ಚಪ್ಪಡಿಯಾಗತೊಡಗಿವೆ.

ಹೊಸ ಆರ್ಥಿಕ ನೀತಿ ಮತ್ತು ಬೆಲೆ ಏರಿಕೆ

ಅಪರಿಮಿತ ಆಹಾರ ಸಂಗ್ರಹ ಗೋಡೌನುಗಳಲಿ ಕೊಳೆಯುತ್ತಿದ್ದರೂ ಅಕ್ಕಿಯ ಬೆಲೆ, ಹಿಂದಿನ ವರ್ಷದ ಶೇ, 6.8ರಷ್ಟು ಏರಿಕೆಯ ಮೇಲೆ ಮತ್ತೆ ಈ ವರ್ಷ ಶೇ, 4.2 ರಷ್ಟು ಬೆಲೆ ಏರಿದೆ. ಗೋಧಿಯ ಬೆಲೆ ಹಿಂದಿನ ವರ್ಷದ ಶೇ 6.7ರಷ್ಟು ಬೆಲೆ ಏರಿಕೆಯ ಮೇಲೆ ಈ ವರ್ಷ ಶೇ. 4.3 ರಷ್ಟು ಬೆಲೆ ಏರಿಕೆ 2 ವರ್ಷಗಳಲ್ಲಿ ಆಹಾರ ಧಾನ್ಯಗಳ ಒಟ್ಟು ಬೆಲೆ ಏರಿಕೆ ಶೇ,15ರಷ್ಟು ಅಡಿಗೆ ಎಣ್ಣೆ 21ರಷ್ಟು ಸಕ್ಕರೆ, ಬೆಲ್ಲಾ ಶೇ, 25ರಷ್ಟು ಏರಿದೆ. ಜುಲೈ 85 ರಿಂದ ಜುಲೈ 86ರ ಮಧ್ಯದಲ್ಲಿ ಬೆಲೆ ಸೂಚ್ಯಾಂಕ ಒಟ್ಟು 8.6ರಷ್ಟು ಏರಿದೆ.

ನಮ್ಮ ಅರ್ಥಮಂತ್ರಿಗಳು ತಮ್ಮ ಆರ್ಥಿಕ ನೀತಿಯ ಈ ಬೃಹತ್ ಸಾದನೆಗಳ ಬಗ್ಗೆ ಹೇಳಿಕೊಳ್ಳಲು ಬಳ ನಾಚಿಕೆ ಪಟ್ಟದ್ದರೆ. ಈ ಮಂತ್ರಿಗಳು.

ಇವೆಲ್ಲಾ ಮುಂದಿನ ಬಜೆಟ್‌ನಲ್ಲಿ ಏನನ್ನು ನಿರೀಕ್ಷಿಸ ಬಹುದು ಎಂಬುದನ್ನು ತೋರಿಸಿವೆ. ಈಗಾಗಲೇ ಅರ್ಥ ಸಚಿವರು ಆಹಾರ ಧಾನ್ಯಗಳಿಗಾಗಿ (ರೇಷನ್ ಅಂಗಡಿಗಳ ಮೂಲಕ ಮಾರಾಟ ಮಾಡವ ಆಹಾರ ಧಾನ್ಯಗಳು) ರಸಗೊಬ್ಬರಕ್ಕಾಗಿ, ರಫ್ತಿಗಾಗಿ ನೀಡುತ್ತಿರುವ ಸಹಾಯ ಧನ ಬಹಳ ಹೆಚ್ಚು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ರಾಜೀವ್ ಗಾಂಧಿಯವರ ಈ ಆರ್ಥಿಕ ನೀತಿಯ ಧಾಳಿಯ ಮುಂದೆ ಭಾರತದ ಜನತೆ ಹಾಗೂ ಅವರ ಜೀವನ ಮಟ್ಟಕ್ಕೆ ಏನು ಬೆಲೆ ಇದೆ. ಮತ್ತಷ್ಟು ಹೆಚ್ಚಿನ ತೆರಿಗೆಗಳು ಜನಸಾಮಾನ್ಯರ ಮೇಲೆ ಬೀಳುತ್ತದೆ. ಇತ್ತೀಚೆಗೆ ಅಂಚೆ ಮತ್ತಿತರ ದರ ಗಳನ್ನು ಏರಿಸಿದ್ದು ಮುಂದಾಗಬಹುದಾದ ಗಂಡಾಂತರಗಳಿಗೆ ಮುನ್ಸೂಚನೆಯಷ್ಟೆ

– ಬಿ. ಟಿ. ರಣದಿವೆ

ಸ್ವಾತಂತ್ರ್ಯದ ನಾಲ್ಕು ದಶಕಗಳಲ್ಲಿ ಬೆಲೆಯೇರಿಕೆ ಎಷ್ಟಾಗಿದೆ ?

-ಕೆ. ವಿ.

'ಬಳಕೆದಾರ ಬೆಲೆ ಸೂಚ್ಯಂಕ' ಎಂಬುದು ಬೆಲೆಯೇರಿಕೆಯ ಪ್ರಮಾಣವನ್ನು ಸುಮಾರಾಗಿ ತಿಳಿಸುವ ಒಂದು ಸಂಖ್ಯೆ. ಅಕ್ಟೋಬರ್ ತಿಂಗಳಿಗೆ ಈ ಸೂಚ್ಯಂಕ 685 ಎಂದು ಇದೀಗ ಪ್ರಕಟವಾಗಿದೆ. ಇದರ ಆಧಾರ ವರ್ಷ 1960. ಅಂದರೆ 1960ರಲ್ಲಿ ಒಂದು ಕುಟುಂಬದ ಸರಾಸರಿ ಜೀವನ ವೆಚ್ಚ 100ರೂ ಇದ್ದಿದ್ದರೆ ಈಗ ಅಕ್ಟೋಬರ್ 1986ರಲ್ಲಿ ಅದೇ ಕುಟುಂಬಕ್ಕೆ ಅಷ್ಟೇ ಪ್ರಮಾಣದ ಆಹಾರ-ಬಟ್ಟೆ ಇತ್ಯಾದಿಗೆ ತಗುಲುವ ವೆಚ್ಚ 685 ರೂಪಾಯಿಗಳು. ಇದರರ್ಥ ಕಳೆದ 26 ವರ್ಷಗಳಲ್ಲಿ ಸುಮಾರಾಗಿ 6.85 ಪಟ್ಟು ಬೆಲೆಯೇರಿದೆ. 1949ಕ್ಕೆ ಹೋಲಿಸಿದರೆ ಈ ಬೆಲೆಯೇರಿಕೆ ಸುಮಾರು 8.33 ಪಟ್ಟಾಗುತ್ತದೆ. ಅರ್ಥಾತ್ ಸ್ವಾತಂತ್ರ್ಯ ನಂತರ ಬೆಲೆಗಳು ಎಂಟಕ್ಕಿಂತಲೂ ಹೆಚ್ಚು ಪಟ್ಟು ಏರಿದೆ.

ಸ್ವಾತಂತ್ರ್ಯ ನಂತರದ ಸುಮಾರು ನಾಲ್ಕು ದಶಕಗಳಲ್ಲಿ ಸತತವಾಗಿ ಬೆಲೆಯೇರಿಕೆಯನ್ನು ಜನಸಾಮಾನ್ಯ ಎದುರಿಸುತ್ತಾ ಬಂದಿದ್ದಾರೆ. ಆದರೆ ಬಂಡವಾಳಶಾಹಿ ವ್ಯವಸ್ಥೆಯು ಬಿಕ್ಕಟ್ಟಿಗೆ ಒಳಗೊಳ್ಳುತ್ತಾ ಹೋದಂತೆ ಬೆಲೆಯೇರಿಕೆಯ ತೀವ್ರತೆಯೂ ಹೆಚ್ಚುತ್ತಾ ಹೋಗುತ್ತಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬೆಲೆಯೇರಿಕೆ ಅಷ್ಟಾಗಿ ಕಂಡು ಬಂದಿರಲಿಲ್ಲ. ಎರಡನೇ ಯೋಜನೆಯ ಅವಧಿಯಲ್ಲಿ ಅಂದರೆ 1955-60ರ 5 ವರ್ಷಗಳ ಅವಧಿಯಲ್ಲಿ ಬೆಲೆಗಳಲ್ಲಿ ಸುಮಾರು 20% ಏರಿಕೆ ಕಂಡು ಬಂತು. ಆದರೆ ಕೇವಲ ಕಳೆದ ಒಂದು ವರ್ಷದ ಅಲ್ಪ ಅವಧಿಯಲ್ಲಿ 9.6% ಬೆಲೆಯೇರಿಕೆ ಕಂಡು ಬಂದಿದೆ. ಇದು ಇತ್ತೀಚಿನ ದಿನಗಳಲ್ಲಿ ಅತ್ಯಂತ ಹೆಚ್ಚು ಪ್ರಮಾಣದ ಬೆಲೆಯೇರಿಕೆ ಎಂದು ಹೇಳಲಾಗುತ್ತಿದೆ.

1949ರಲ್ಲಿ ಜೀವನ ವೆಚ್ಚ 100ರೂ ಆಗಿದ್ದರೆ ಅದು 1960 ರಲ್ಲಿ 122 ಆಯಿತು. ಮುಂದಿನ ಐದು ವರ್ಷಗಳಲ್ಲಿ ಆಹಾರ ಪದಾರ್ಥಗಳ ಬೆಲೆಗಳಲ್ಲಿ 40%, ಕಾಳುಗಳಿಗೆ 45% ಹಾಗೂ ದ್ವಿದಳ ಧಾನ್ಯಗಳಲ್ಲಿ 76% ಹೆಚ್ಚಳ ಕಂಡು ಬಂತು. ಇದರ ಪರಿಣಾಮವಾಗಿ 1965ರಲ್ಲಿನ ಬೆಲೆ ಸೂಚ್ಯಂಕ 137. ಬೆಲೆಯೇರಿಕೆಯ ಪ್ರಮಾಣ ಇನ್ನಷ್ಟು ಹೆಚ್ಚಿ 1970ರಲ್ಲಿ ಅದು 184 ತಲುಪಿತು. ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಈ ಏರಿಕೆಯ ಪ್ರಮಾಣ ಮತ್ತಷ್ಟು ತೀವ್ರಗೊಂಡು 1974ರ ವೇಳೆಗೆ ಬೆಲೆಗಳ ಏರಿಕೆ ಮೂರು ಪಟ್ಟನ್ನು ಮೀರಿತು (1949ಕ್ಕೆ ಹೋಲಿಸಿದಾಗ).

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ನಂತರ ಬೆಲೆಯೇರಿಕೆಯ ತೀವ್ರತೆಯೆಷ್ಟು ಎಂಬುದನ್ನು ಈ ಕೆಳಗಿನ ಸೂಚ್ಯಂಕಗಳಿಂದ ನಮ್ಮ ಓದುಗರು ತಾವೇ ಕಾಣಬಹುದು. ಈ ಸೂಚ್ಯಂಕಗಳು 1949ರ ಬೆಲೆಗಳನ್ನು ಆಧರಿಸಿವೆ. ಅಂದರೆ 1948ರ ಹೋಲಿಕೆಯಲ್ಲಿ ಬೆಲೆಯೇರಿಕೆ ಎಷ್ಟು ಎಂಬುದನ್ನು ಸೂಚಿಸುತ್ತವೆ.

ವರ್ಷ	ಸೂಚ್ಯಂಕ ಕರ್ನಾಟಕ	ಅಖಿಲ ಭಾರತ
1974	371	370
1975	411	390
1976	382	360
1977	418	390
1978	410	400
1979	468	455
1980	552	500
1981	636	547
1982	662	603
1983	731	678
1984	790	720
1985	820	760

ರಾಜೀವ ಗಾಂಧಿಯವರ ಹೊಸ ಆರ್ಥಿಕ ನೀತಿಯ ಫಲವಾಗಿ ಕಳೆದ ಒಂದು ವರ್ಷದಲ್ಲಿ ಕಂಡುಬಂದ ಬೆಲೆ ಏರಿಕೆಯ ಪ್ರಮಾಣ ನೋಡಿ.

ತಿಂಗಳು	ಬೆಲೆ ಸೂಚ್ಯಂಕ (ಆಧಾರ ವರ್ಷ-1949) ಬೆಂಗಳೂರು	ಅಖಿಲಭಾರತ
ನವೆಂಬರ್ 1985	831	766
ಡಿಸೆಂಬರ್	844	766
ಜನವರಿ 1986	850	764
ಫೆಬ್ರುವರಿ	868	769
ಮಾರ್ಚ್	867	775
ಏಪ್ರಿಲ್	867	782
ಮೇ	869	792
ಜೂನ್	890	800
ಜುಲೈ	887	812
ಆಗಸ್ಟ್	881	817
ಸೆಪ್ಟಂಬರ್	870	822
ಅಕ್ಟೋಬರ್	—	833

ರೈಲ್ವೆ ಅಂಚೆ ಟೆಲಿಫೋನ್ ದರಗಳ ಏರಿಕೆ

ಆರ್ಥಿಕ ಅಭಿವೃದ್ಧಿ, ಆಡಳಿತ ಹಾಗೂ ರಕ್ಷಣಾ ವೆಚ್ಚಕ್ಕೆ ಕೇಂದ್ರ ಸರಕಾರವು ವಾರ್ಷಿಕ ಮುಂಗಡ ಪತ್ರವನ್ನು ಪ್ರತಿ ಫೆಬ್ರವರಿ ತಿಂಗಳಿನಲ್ಲಿ ಎರಡೂ ಸಂಸತ್ ಸದನಗಳಲ್ಲಿ ಮಂಡಿಸಿ ಸಾಕಷ್ಟು ಚರ್ಚಿಸಿ ಅಂಗೀಕಾರ ಪಡೆಯುವುದು ಸಂವಿಧಾನಾತ್ಮಕ ಹಾಗೂ ಪ್ರಜಾಸತ್ತಾತ್ಮಕ ಮಾರ್ಗ. ಆದರೆ, ಕಳೆದ 5-6 ವರ್ಷಗಳಿಂದ ಈ ಪರಂಪರೆಯನ್ನು ಅಲಕ್ಷಿಸಲಾಗುತ್ತಿದ್ದು, ಸರಕಾರ ಆಡಳಿತ ನಿರ್ದೇಶನಗಳ ಮೂಲಕ ಜೀವನಾವಶ್ಯಕ ವಸ್ತುಗಳ ಮತ್ತು ಸೇವಾ ಸೌಲಭ್ಯಗಳ ಮೇಲೆ ಅಪ್ರತ್ಯಕ್ಷ ತೆರಿಗೆ ಹಾಗೂ ಬೆಲೆ ಏರಿಕೆಗಳನ್ನು ಏಕಪಕ್ಷೀಯವಾಗಿ ಮುಂಗಡ ಪತ್ರ ಮಂಡಿಸುವ ಸ್ವಲ್ಪಕಾಲದ ಮುಂಚಿತವಾಗಿಯೇ ಘೋಷಿಸುತ್ತಿದ್ದು, ಸರ್ವಾಧಿಕಾರಿ ಪ್ರವೃತ್ತಿಯನ್ನು ಚಲಾಯಿಸುತ್ತಿದೆ, ಸಂಸತ್‌ಅನ್ನು ಅಲಕ್ಷಿಸುತ್ತಿದೆ. ರಾಜೀವ ಗಾಂಧಿಯ ಹೊಸ ಆರ್ಥಿಕ ನೀತಿಯಲ್ಲಿ, ಏಳನೇ ಯೋಜನೆಯ ಅವಧಿಯಲ್ಲಿ, ವರ್ಷದ ಉದ್ದಕ್ಕೂ ಬಂಡವಾಳಶಾಹಿಗಳಿಗೆ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಸತತವಾಗಿ ತೆರಿಗೆ ರಿಯಾಯತಿಗಳನ್ನು ನೀಡಲಾಗುತ್ತಿದೆ. ಬಡ ಹಾಗೂ ಮಧ್ಯ ವರ್ಗದ ಜನಕೋಟಿಯ ಮೇಲೆ ಹೆಚ್ಚು ಹೆಚ್ಚು ತೆರಿಗೆಯ, ಬೆಲೆ ಏರಿಕೆಯ ಭಾರವನ್ನು ಹೊರಿಸಲಾಗುತ್ತಿದೆ.

ಏಕ ಪಕ್ಷೀಯವಾಗಿ ಹೊಸ ತೆರಿಗೆಗಳು

ಕೇಂದ್ರ ರೈಲ್ವೆ ಮಂತ್ರಿ ಮಾಧವ್ ರಾವ್ ಸಿಂಧ್ಯ ಮತ್ತು ಸಂಪರ್ಕಮಂತ್ರಿ ಅರ್ಜುನ್‌ಸಿಂಘ್ ಸಂಸತ್ತಿನಲ್ಲಿ ಯಾವ ಪೂರ್ವ ಚರ್ಚೆ ಇಲ್ಲದೆ, ನವಂಬರ್ 86 ರ ಕೊನೆಯಲ್ಲಿ ಏಕಾ ಏಕಿಯಾಗಿ ರೈಲ್ವೆ, ಅಂಚೆ, ಟೆಲಿಫೋನ್ ಸೇವೆಗಳ ದರಗಳನ್ನು ಹೆಚ್ಚಿಸಿ, 1986-87 ರ ಮುಂದಿನ ನಾಲ್ಕು ತಿಂಗಳಲ್ಲಿ ರೂ. 774 ಕೋಟಿಯಷ್ಟು ಮತ್ತು ಮುಂದೆ ವಾರ್ಷಿಕ ರೂ 2422 ಕೋಟಿಯಷ್ಟು ಅಪ್ರತ್ಯಕ್ಷ ತೆರಿಗೆಯನ್ನು ಜನಸಾಮಾನ್ಯರ ಮೇಲೆ ನಿರ್ದಯವಾಗಿ ಹೇರಿದರು ಹದಿನೈದು ದಿನಗಳ ಪೂರ್ವದಲ್ಲಿ ಈ ಅವಶ್ಯಕ ಸೇವಾ ಸೌಲಭ್ಯಗಳ ದರಗಳನ್ನು ಏರಿಸಿ ರೂ 820 ಕೋಟಿಗೂ ಹೆಚ್ಚಿನ ಸಂಪನ್ಮೂಲ ಸಂಗ್ರಹಿಸುವ ಉದ್ದೇಶವನ್ನು ಅನೌಪಚಾರಿಕವಾಗಿ ಬಹಿರಂಗಗೊಳಿಸಲಾಯಿತು. ಜನರೂ ಜನರ ಪ್ರತಿನಿಧಿಗಳೂ ಹೊಸ ತೆರಿಗೆಯ ಭಾರ ಸಹಿಸಿಕೊಳ್ಳಲು ಮಾನಸಿಕವಾಗಿ ತಯಾರಾಗಲಿ ಎಂದು. ಸಂಸತ್‌ನಲ್ಲಿ ಹೊಸ ತೆರಿಗೆಗಳನ್ನು ಏಕಾಏಕಿಯಾಗಿ ಘೋಷಿಸಿದಾಗ, ವಿರೋಧ ಪಕ್ಷಗಳಿಂದ ಮುಖ್ಯವಾಗಿ ಸಿ. ಪಿ. ಐ. (ಎಂ), ಸಿ. ಪಿ. ಐ., ಜನತಾ, ಲೋಕದಳ, ತೆಲುಗುದೇಶಂ ತೀವ್ರ ಪ್ರತಿಭಟನೆ, ಸಭಾತ್ಯಾಗ ಪ್ರತಿಕ್ರಿಯೆಗಳು ಕಂಡು ಬಂದವು. ಕೇಂದ್ರ ಮಾಜಿ ಮಂತ್ರಿ ಭಗವತ್ ಝಾ ಅಜಾದ್ ಸೇರಿದಂತೆ ಅನೇಕ ಗಣ್ಯ ಕಾಂಗ್ರೆಸ್ ಸಂಸತ್ ಸದಸ್ಯರೂ ನಡುಗಾಲದ ಅನಿರೀಕ್ಷಿತ ಭಾರಿ ತೆರಿಗೆ ವಿರುದ್ಧ ತಮ್ಮ ತೀವ್ರ ಅಸಮಾಧಾನ ವ್ಯಕ್ತಗೊಳಿಸಿದರು.

ರೂ 5000 ಕೋಟಿ ಕೊರತೆ !

ರೈಲ್ವೆ, ಅಂಚೆ, ಸಂಪರ್ಕ ಇಲಾಖೆಗಳಲ್ಲಿನ ಭಾರಿ ಕೊರತೆ ಪರಿಸ್ಥಿತಿ ನಾಲ್ಕನೇ ವೇತನ ಆಯೋಗದ ಅನುಷ್ಠಾನದಿಂದ ಉಂಟಾದ ಅಧಿಕ ಆಡಳಿತ ವೆಚ್ಚ ಮತ್ತು ಏಳನೇ ಪಂಚವಾರ್ಷಿಕ ಯೋಜನೆಯ ಅಭಿವೃದ್ಧಿ ವೆಚ್ಚಗಳ ಕಾರಣಗಳನ್ನು ಹೊಸತೆರಿಗೆ ಹೇರಿಕೆಗೆ ಕೇಂದ್ರ ಸರಕಾರ ಮುಂದೊಡ್ಡುತ್ತಿದೆ. ನಾಲ್ಕನೇ ವೇತನ ಆಯೋಗವು ಮೂರು ವರ್ಷಗಳ ಹಿಂದೆ ಹಿಂದೆಯೇ ನೇಮಿಸಲ್ಪಟ್ಟಿದ್ದು. ಈ ವರ್ಷದಲ್ಲಿ ಅದರ ವರದಿಯನ್ನು ನಿರೀಕ್ಷಿಸಲಾಗಿದ್ದು, ಕಳೆದ ಮುಂಗಡಪತ್ರ : 1986-87 ಮಂಡಿಸುವಾಗಲೇ ಈ ಸಂಬಂಧ ಹೆಚ್ಚುವರಿ ವೆಚ್ಚದ ಮುನ್ಸೂಚನೆ ಇತ್ತು. ಆದುದರಿಂದ ಈಗ ಆ ಕಾರಣದ ನೆಪದಲ್ಲಿ ನಡುಗಾಲದಲ್ಲಿ ಹೊಸ ತೆರಿಗೆ ಹೇರುವುದು ಸಮಂಜಸವಲ್ಲ. ಬದಲು, ಕೇಂದ್ರ ಸರಕಾರವು ದುರುದ್ದೇಶದಿಂದಲೇ ನೌಕರರ ವಿರುದ್ಧ ಜನಸಾಮಾನ್ಯರನ್ನು ಎತ್ತಿ ಕಟ್ಟುವ ಕುತಂತ್ರ ನಡೆಸುತ್ತಿದೆ. ಕೊರತೆ ಪರಿಸ್ಥಿತಿಯನ್ನು ನೀಗಿಸಲು, ಈ ಇಲಾಖೆಗಳಲ್ಲಿ ಕಾರ್ಯದಕ್ಷತೆ ಸಾಧಿಸಲು, ಭ್ರಷ್ಟಾಚಾರ-ಅವ್ಯವಹಾರ ಸಂಪನ್ಮೂಲಗಳ ಸೋರುವಿಕೆ ನಿವಾರಿಸಲು, ಕಾರ್ಮಿಕರು ಆಡಳಿತದಲ್ಲಿ ಭಾಗವಹಿಸಲು ಸರಕಾರ ಯಾವುದೇ ಕ್ರಮ ಕೈಕೊಳ್ಳುವುದಿಲ್ಲ.

ಈ ಖಾತೆಗಳೂ ಸೇರಿದಂತೆ, ಏಳನೇ ಯೋಜನೆಯ ಅಭಿವೃದ್ಧಿ ಕಾರ್ಯಗಳಿಗೆ ಸಾರ್ವಜನಿಕ ಸೇವಾ ಸೌಲಭ್ಯಗಳ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ಅಪ್ರತ್ಯಕ್ಷ ತೆರಿಗೆ ಹೇರಿಕೆ, ದೇಶ ವಿದೇಶಗಳಿಂದ ಸಾಲ ಮತ್ತು ಕೃತಕ ಹಣ ಸೃಷ್ಟಿಯಂತಹ ಬಂಡವಾಳಶಾಹಿ, ಜನವಿರೋಧಿ ಮಾರ್ಗಗಳನ್ನು ಕಾಂಗ್ರೆಸ್ ಸರಕಾರ ಅನುಸರಿಸಿಕೊಂಡು ಬರುತ್ತಿದೆ. ಯೋಜನೆಯ ವೆಚ್ಚಕ್ಕೆ ಶ್ರೀಮಂತರ ಆಸ್ತಿ, ಆದಾಯ ಲಾಭಗಳ ಮೇಲೆ ಏರಿಕೆಯ ದರದಲ್ಲಿ ಪ್ರತ್ಯಕ್ಷ ತೆರಿಗೆಗಳನ್ನು ವಿಧಿಸುವುದರಲ್ಲಿ ತೆರಿಗೆ ತಪ್ಪಿಸುವವರನ್ನು ಕಪ್ಪು ಹಣ ಸಂಗ್ರಹಿಸುವವರನ್ನು ಹಿಡಿದು ಅವರ ಆಸ್ತಿ ಆದಾಯಗಳನ್ನು ಮುಟ್ಟುಗೋಲುಹಾಕಿ ಕಠಿಣ ಶಿಕ್ಷೆ ವಿಧಿಸುವುದರಲ್ಲಿ ಕಾಂಗ್ರೆಸ್ ಸರಕಾರ ಭಾರಿ ಹಿಂದುಳಿದಿದೆ. ನಡುಗಾಲದಲ್ಲಿ ರೂ. 774 ಕೋಟಿಯಷ್ಟು ಹೊರತೆರಿಗೆ ಹೇರಿಕೆಯೂ, 1986-87 ರಲ್ಲಿ ನಿರೀಕ್ಷಿತ ಕೊರತೆಯು ರೂ 3650 ಕೋಟಿಯಿಂದ ರೂ 5000 ಕೋಟಿಗಳಾ ಮೀರುವ ನಿರೀಕ್ಷೆ ಇದೆ. (ವಿ.ಪಿ.ಸಿಂಘರ 2-12-86 ರಂದು ರಾಜ್ಯಸಭೆಯಲ್ಲಿ ಹೇಳಿಕೆ) ಮುಂದಿನ ದಿನಗಳಲ್ಲಿ, ಏಳನೇ ಯೋಜನೆಯ ಅವಧಿಯಲ್ಲಿ ಜನಕೋಟಿಯ ಮೇಲೆ ಇನ್ನಷ್ಟು ತೆರಿಗೆಗಳ, ಬೆಲೆ ಏರಿಕೆಗಳ ಭಾರಬೀಳಲಿದೆ. ಅವರ ಜೀವನ ಮಟ್ಟ ಕುಸಿಯಲಿದೆ.

(6ನೇ ಪುಟ ನೋಡಿ)

ಅಧೋಗತಿಗಿಳಿಯುತ್ತಿರುವ ರೂಪಾಯಿ

ಕಳೆದ ವರ್ಷದ ಸೆಪ್ಟಂಬರ್‌ನಲ್ಲಿ ಸಂಸತ್ತಿನಲ್ಲಿ ಕೇಂದ್ರ ಸರ್ಕಾರದ ಹಣಕಾಸಿನ ರಾಜ್ಯ ಖಾತೆ ಮಂತ್ರಿ ಜನಾರ್ಧನ ಪೂಜಾರಿಯವರು ನೀಡಿದ ರೂಪಾಯಿಯ ನಿಜವಾದ ಬೆಲೆ ಇಳಿದು ಬಂದ ದಾರಿ ಹೀಗಿದೆ. ಇದು 1960 ರಲ್ಲಿ ರೂಪಾಯಿಯ ಬೆಲೆ 100 ಪೈಸೆಯಿತ್ತು ಎಂದಿಟ್ಟುಕೊಂಡಾಗ.

1960	100 ಪೈಸೆ	1981	22.68 ಪೈಸೆ
1965	72.99 ಪೈಸೆ	1982	21.05 ಪೈಸೆ
1970	54.35 ಪೈಸೆ	1983	18.80 ಪೈಸೆ
1975	31.15 ಪೈಸೆ	1984	17.36 ಪೈಸೆ
1980	25.64 ಪೈಸೆ	1985	16.64 ಪೈಸೆ

ಇತ್ತೀಚಿಗೆ ದೊರೆತ ಅಂಕಿ ಅಂಶಗಳ ಪ್ರಕಾರ ಈ ವರ್ಷದ ಆಗಸ್ಟ್ ತಿಂಗಳಲ್ಲಿ ರೂಪಾಯಿಯ ಬೆಲೆ 14.88ಕ್ಕೆ ಹಾಗೂ ಅಕ್ಟೋಬರ್ ತಿಂಗಳಲ್ಲಿ 14.60ಕ್ಕೆ ಇಳಿದಿದೆ. ಆಗಸ್ಟ್ 1986ರಲ್ಲಿ ಬೆಂಗಳೂರಿನಲ್ಲಿ ರೂಪಾಯಿಯ ಬೆಲೆ. ಕೇವಲ 13.97 ಪೈಸೆ, ಮುಂಬಯಿಯಲ್ಲಿ 14.10ಪೈಸೆ, ದೆಹಲಿಯಲ್ಲಿ 14 14 ಪೈಸೆ ಹಾಗೂ ಕಲ್ಕತ್ತೆಯಲ್ಲಿ 14.88 ಪೈಸೆ.

ಚೀನೀ ಭಾಷೆಯಲ್ಲಿ ಲಿಪಿ ಸುಧಾರಣೆ

ಅರ್ಥವಾಗದ ಯಾವುದೇ ಒಂದು ವಿಷಯವನ್ನು ಚೀನೀ ಓಗಟು ಅನ್ನುವುದು ವಾಡಿಕೆ. ಚೀನೀ ಭಾಷೆ ಅಷ್ಟು ಕ್ಲಿಷ್ಟವಾದುದೆಂದು ಇದರ ಅರ್ಥ ಚೀನೀ ಭಾಷೆಯ ವಿಶೇಷವೆಂದರೆ ಅದರಲ್ಲಿ ಅಕ್ಷರಗಳ ಬದಲಾಗಿ ಆಕಾರಗಳನ್ನು ಬಳಸಲಾಗುತ್ತಿದೆ. ಇವು ಯಾವುದೇ ವಸ್ತು ಅಥವಾ ವಿಷಯದ ಕುರಿತು ನಮಗಿರುವ ಕಲ್ಪನೆಯ ಆಧಾರದಲ್ಲಿ ಸಾವಿರಾರು ವರ್ಷಗಳಿಂದ ರಚಿಸಿ ರೂಢಿಗೆ ತಂದಿರುವ ಆಕಾರಗಳು. ಚೀನೀ ಭಾಷೆಯಲ್ಲಿ ಇಂತಹ ಆಕಾರಗಳ ಸಂಖ್ಯೆ ಐವತ್ತು ಸಾವಿರಕ್ಕೂ ಮೀರಿದೆ. ಕಲ್ಪನೆಯ ಆಧಾರದ ಮೇಲೆ ಹೀಗೆ ರೂಪುಗೊಂಡ ಇಂತಹ ಸಾವಿರಾರು ಆಕಾರಗಳನ್ನು ಗುರುತಿಸುವುದು ತುಂಬಾ ಕಷ್ಟದ ಕೆಲಸ. ಪ್ರಸಿದ್ಧ ಚೀನಿ ಬರಹಗಾರ ಉ-ಕ್ಸಿನ್ ಹೇಳುವಂತೆ ಹತ್ತು ಪ್ಪತ್ತು ವರ್ಷ ಸಾಧನೆಯ ಬಳಿಕವೂ ಸಾಮಾನ್ಯಜನ ಈ ಎಲ್ಲ ಆಕಾರಗಳನ್ನು ಕಲಿಯಲು ಅಸಾಧ್ಯವಾಗುತ್ತದೆ; ಹಾಗಾಗಿ ವ್ಯಾಪಕ ಶಿಕ್ಷಣ ನೀಡುವ ಕಾರ್ಯಕ್ಕೆ ತೊಡಕಾಗುತ್ತದೆ.

ಚೀನಾದ ಕ್ರಾಂತಿಯ ಬಳಿಕ ಚೀನೀ ಭಾಷೆಗೆ ಸಾರ್ವತ್ರಿಕವಾದ ಮತ್ತು ಸರಳವಾದ ಲಿಪಿಯೊಂದನ್ನು ರೂಪಿಸುವ ಕಾರ್ಯವನ್ನ ಕೈಗೊಳ್ಳಲಾಗಿದೆ. ಭಾಷಾ ಸುಧಾರಣೆಯ ಕುರಿತು 1952 ರಲ್ಲೇ ಸಮಿತಿಯನ್ನು ರಚಿಸಲಾಗಿರುವ ಸಮಿತಿ ಬೀಜಿಂಗ್ ಪ್ರದೇಶದಲ್ಲಿ ಪ್ರಚಲಿತವಿರುವ ಚೀನೀ ಭಾಷೆ ಪುಟೊಂಗುವಾವನ್ನು ಲ್ಯಾಟಿನ್ ಅಕ್ಷರಗಳಿಗೆ ಸರಿಹೊಂದುವಂತೆ ಬದಲಿಸಿ ಅದನ್ನು ಇಡೀ ದೇಶದಲ್ಲಿ ಏಕರೂಪವಾಗಿ ಬಳಕೆಗೆ ತರುವಂತೆ ಶಿಫಾರಸು ಮಾಡಿದೆ. ಇದರಲ್ಲಿ ಅಕ್ಷರಗಳು ಸರಳವಾಗಿದ್ದು ಅವುಗಳ ಸಂಖ್ಯೆ ಅತ್ಯಂತ ಕಡಿಮೆಯಾಗಿರುವಂತೆ ಪ್ರಯತ್ನಿಸಲಾಗಿದೆ. ಪ್ರಸಕ್ತ ಪಂಚವಾರ್ಷಿಕ ಯೋಜನೆಯಲ್ಲಿ (1986-90) ಈ ಲಿಪಿ ಮತ್ತು ಭಾಷಾ ಸುಧಾರಣೆಗೆ ಆದ್ಯತೆ ನೀಡಲಾಗಿದ್ದು, 1990 ರೊಳಗಾಗಿ ಪುಟೊಂಗುವಾ ರಾಷ್ಟ್ರಾದ್ಯಂತ ಏಕರೂಪದಲ್ಲಿ ಬಳಕೆಗೆ ಬರಲಿದೆಯೆಂದು ಚೀನೀ ಪತ್ರಿಕೆಗಳು ಪ್ರಕಟಿಸಿವೆ. ○

ಸಿ. ಪಿ. ಐ. (ಎಂ) ಅನ್ನು ಗೆಲ್ಲಿಸಿರಿ

ರಾಜ್ಯದ ರಾಜಕೀಯದಲ್ಲಿ ಜಿಲ್ಲಾ ಪರಿಷತ್ ಮಹತ್ವದ ಪಾತ್ರ ವಹಿಸಲಿರುವುದರಿಂದ, ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಕಾರ್ಯ ಅದರ ಮೂಲಕ ಕಾರ್ಯಗತವಾಗಲಿರುವುದರಿಂದ, ಆ ಸಂಸ್ಥೆ ಪಟ್ಟಭದ್ರ ಹಿತಾಸಕ್ತಿಗಳ ಕೈ ಸೇರದಂತೆ ಮುಂಜಾಗ್ರತೆ ವಹಿಸಿ, ಸಿ. ಪಿ. ಐ. (ಎಂ), ಮತ್ತು ಪುರೋಗಾಮಿ ಜನರನ್ನೇ ಆರಿಸಿ ತರಬೇಕೆಂದು ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್. ಸೂರ್ಯನಾರಾಯಣ ರಾವ್ ಮತ್ತು ಎನ್. ಕೆ. ಉಪಾಧ್ಯಾಯರು ಗುಲ್ಬರ್ಗಾ ಜಿಲ್ಲೆಯ ಆಳಂದ ಜೇವರ್ಗಿ, ಶಹಾಪುರ ಮೊದಲಾದ ಕಡೆಗಳ ಹಳ್ಳಿಗಳಲ್ಲಿ ಭಾಷಣ ಮಾಡುತ್ತ, ಹೇಳಿದರು. ಅಭಿವೃದ್ಧಿ ದೃಷ್ಟಿಯಲ್ಲಿ ಗುಲ್ಬರ್ಗ ಜಿಲ್ಲೆ ಬಹಳ ಹಿಂದುಳಿದಿದು, ಅಲ್ಲಿ ಉತ್ತಮ ರಸ್ತೆ ಕುಡಿಯುವ ನೀರಿನ ವ್ಯವಸ್ಥೆ, ನಿವೇಶನಗಳೆಲ್ಲ ಆಗಬೇಕಾದರೆ ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡುವ ವ್ಯಕ್ತಿಗಳು ಆರಿಸಿ ಬರಲೇಬೇಕೆಂದು ಹೇಳಿದರು. ಜಿಲ್ಲೆಯ ಪಕ್ಷದ ಮುಖಂಡರಾದ ಕಲ್ಲಪ್ಪ ಕಿರಣಗಿ, ಸಿ. ಎ. ಪಾಟೀಲ್, ಮಾನಪಡೆ ಮೊದಲಾದವರೆಲ್ಲ ಸಿ.ಪಿ.ಐ.(ಎಂ) ಪಕ್ಷದ ಪರವಾಗಿ ತೀವ್ರ ಪ್ರಚಾರ ನಡೆಸಿದ್ದಾರೆ. ○

ಡಿ. ವೈ. ಎಫ್. ಐ. ರಾಯಚೂರು ಸಮ್ಮೇಳನ

ಡಿ. ವೈ. ಎಫ್. ಐ. ನ ಪ್ರಥಮ ರಾಯಚೂರು ಜಿಲ್ಲಾ ಸಮ್ಮೇಳನ ಡಿಸೆಂಬರ್ 11 ರಂದು ನಡೆಯಿತು. ಕಾ| ಗಂಗಾಧರ ಕುಷ್ಟಗಿ ಧ್ವಜಾರೋಹಣ ಮಾಡಿದರು. ಗೂರ್ಖಾಲ್ಯಾಂಡ್ ಚಳವಳಿಯ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿ ಅಸು ನೀಗಿದ ಡಿ. ವೈ. ಎಫ್. ಐ. ಸಂಗಾತಿಗಳಿಗೆ ಮತ್ತು ಇತ್ತೀಚೆಗೆ ನಿಧನರಾದ ಕಾ| ಮಹಮ್ಮದ್ ಹಸನ್‌ಖಾನ್ ಮತ್ತು ಕಾ|| ಚಂದುಕುಟ್ಟಿಯವರಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿತು.

ಸಿ ಪಿ. ಐ (ಎಂ) ನ ನಗರಸಭಾ ಸದಸ್ಯರಾದ ಕಾ|| ಹರಿಣಿ ಕಸ್ತೂರಿ ಸಮ್ಮೇಳನವನ್ನು ಉದ್ಘಾಟಿಸಿದರು. ಡಿ. ವೈ. ಎಫ್. ಐ. ನ ರಾಜ್ಯ ಕಾರ್ಯದರ್ಶಿ ಕಾ|| ಶಿವರಾಂ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸ್ಥಳೀಯ ಸೋದರ ಸಂಘಟನೆಗಳ ಪ್ರತಿನಿಧಿಗಳು ಸಮ್ಮೇಳನಕ್ಕೆ ಶುಭ ಹಾರೈಸಿದರು.

ಜಿಲ್ಲಾ ಕಾರ್ಯದರ್ಶಿ ಕಾ|| ರಾಘವೇಂದ್ರ ಕುಷ್ಟಗಿ ಜಿಲ್ಲೆಯ ಡಿ. ವೈ. ಎಫ್. ಐ. ನ ಚಟುವಟಿಕೆಗಳ ಸಮಗ್ರ ವರದಿಯನ್ನು ಮಂಡಿಸಿದರು.

ಸಮ್ಮೇಳನವು ವಿವಿಧ ಬೇಡಿಕೆಗಳ ಬಗ್ಗೆ ನಿರ್ಣಯಗಳನ್ನ ಅಂಗೀಕರಿಸಿತು.

ಸಮ್ಮೇಳನವು ಕೆಳಕಂಡ ನೂತನ ಜಿಲ್ಲಾ ಸಮಿತಿಯನ್ನು ಚುನಾಯಿಸಿದೆ.

ಕಾ|| ಗಂಗಾಧರ ಕುಷ್ಟಗಿ - ಅಧ್ಯಕ್ಷ ಕಾ|| ನಾರಾಯಣ ಕಿಲ್ಲೇದ ಉಪಾಧ್ಯಕ್ಷ ಕಾ|| ರಾಘವೇಂದ್ರ ಕುಷ್ಟಗಿ ಕಾರ್ಯದರ್ಶಿ, ಕಾ|| ವೆಂಕಟೇಶ ಹೀರಾ ಸಹ ಕಾರ್ಯದರ್ಶಿ, ಕಾ|| ಸಿದ್ದಪ್ಪ ಸಿಂಧನೂರು ಖಜಾಂಚಿ. ○

ಪುರಸಭೆಯ ದೌರ್ಜನ್ಯ

ಭದ್ರಾವತಿ ನಗರದ ಬೋವಿ ಕಾಲೋನಿಯಲ್ಲಿ ಕಲ್ಲು ಹೊಡೆದು ಜೀವನ ಸಾಗಿಸುವ ಬಡಕುಟುಂಬಗಳು ಸುಮಾರು 40 ವರ್ಷಗಳಿಂದ ವಾಸವಾಗಿದ್ದಾರೆ. ಡಿಸೆಂಬರ್ 2 ರಂದ ಇಲ್ಲಿನ ಗುಡಿಸಲುಗಳಿಗೆ ಬೆಂಕಿ ಹೊತ್ತಿಕೊಂಡು ಸುಟ್ಟು ಬೂದಿಯಾಗಿದ. ಅಲ್ಲಿನ ಜನರು ಮತ್ತು ಗುಡಿಸಲುಗಳನ್ನು ಕಟ್ಟಿಕೊಳ್ಳಲು ಪುರಸಭೆ ಅಧಿಕಾರಿಗಳು ಕೆಲವು ಪಟ್ಟಭದ್ರ ಹಿತಾಶಕ್ತಿಗಳ ಪ್ರಭಾವಕ್ಕೊಳಗಾಗಿ ತಡೆಯುಂಟುಮಾಡುತ್ತಿದ್ದಾರೆ. ಇಲ್ಲಿನ ಕುಟುಂಬಗಳು ನಿರಾಶ್ರಿತರಾಗಿ ಬಿಸಿಲು ಚಳಿಗಳಿಗೆ ತುತ್ತಾಗಿ ತಮ್ಮ ಸುಟ್ಟುಹೋದ ಗುಡಿಸಲಿನ ಭಗ್ನಾವಶೇಷಗಳ ಮೇಲೆ ಮಲಗುತ್ತಿದಾರೆ. ಈ ದಾರುಣ ದೃಶ್ಯವನ್ನು ಕಂಡು ಪುರಸಭೆ ಅಧಿಕಾರಿಗಳ ಮನಸ್ಸು ಕಲ್ಲಾಗಿದೆ. ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷವು ಅಧಿಕಾರಿಗಳ ಕ್ರಮವನ್ನು ತೀವ್ರವಾಗಿ ಖಂಡಿಸಿ, ಈ ಬಗ್ಗೆ ತೀವ್ರವಾದ ಹೋರಾಟ ರೂಪಿಸಲು ಸಜ್ಜಾಗಿದೆ. ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಬಡ ಕುಟುಂಬಗಳಿಗೆ ನ್ಯಾಯ ದೊರಕಿಸಬೇಕೆಂದು ಆಗ್ರಹ ಪಡಿಸಿದೆ.

ಬೋನಸ್ ಕೇಳಿದ ಕಾರ್ಮಿಕರು ಬೀದಿ ಪಾಲು

ದಾಂಡೇಲಿಯ ಸರಕಾರೀ ಸ್ವಾಮ್ಯದ ಮೈಸೂರು ಮಿನರಲ್ಸ್ ಸಂಸ್ಥೆಗೆ ಸೇರಿದ ಕಾರ್ಮಿಕರು ತಮಗೆ ಮಂಜೂರಾಗಿರುವ ಬೋನಸ್ ಹಣ ಕೊಡಬೇಕೆಂದು ಒತ್ತಾಯಿಸಿ ಡಿಸೆಂಬರ್ 10 ರಂದು ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು. ಸಂಸ್ಥೆಯು ಬೋನಸ್ ಅನ್ನು ಘೋಷಿಸಿದ್ದರೂ ಕೂಡಾ ಅದರ ಮ್ಯಾನೇಜರ್ ಕಾರ್ಮಿಕರಿಗೆ ಬೋನಸ್ ನಿರಾಕರಿಸಿ ಕೆಲಸದಿಂದ ಕಾರ್ಮಿಕರನ್ನು ತೆಗೆದುಹಾಕಿದ್ದಾರೆ. ಅಲ್ಲದೆ ಕಾರ್ಮಿಕರ ಹೆಸರಿನಲ್ಲಿ ನಕಲಿ ಹೆಬ್ಬೆಟ್ಟು ಒತ್ತಿ ಬೋನಸ್ ಹಣವನ್ನು ಲಪಟಾಯಿಸಿರುವುದಾಗಿ ತಿಳಿದುಬಂದಿದೆ.

ಈ ಬಗ್ಗೆ ಕಾರ್ಮಿಕರು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿ, ನ್ಯಾಯ ದೊರಕಿಸಬೇಕೆಂದು ಮಾಡಿಕೊಂಡ ಮನವಿ ವಿಫಲಗೊಂಡ ನಂತರ ಡಿ.10 ರಂದು ಸಂಸ್ಥೆಯ ಟ್ರಕ್ಕುಗಳನ್ನು ತಡೆಹಿಡಿದರು. ಆಗ ಬೆಂಗಳೂರಿನಿಂದ ಸಂಸ್ಥೆಯ ಪರ್ಸನಲ್ ಮ್ಯಾನೇಜರ್ ಅವರು ದಾಂಡೇಲಿಗೆ ಆಗಮಿಸಿ ಸಂಘದ ಮುಖಂಡರ ಜೊತೆ ಮಾತುಕತೆ ನಡೆಸಿದರು. ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವ ಭರವಸೆ ನೀಡಿದ ನಂತರ ಕಾರ್ಮಿಕರು ಕೆಲಸವನ್ನು ಪ್ರಾರಂಭಿಸಿದರು. ಸಿ.ಐ.ಟಿ.-ಯು ಮುಖಂಡರಾದ ಕಾ. ಹರೀಶ ನಾಯ್ಕ ಮತ್ತು ಕಾ. ಆಶ್ರಮ ಖಾನ್ ಅವರು ಈ ಹೋರಾಟದ ನೇತೃತ್ವ ವಹಿಸಿದ್ದರು. ○

ವಿದ್ಯಾರ್ಥಿ ಚಳವಳಿಯ ಸುವರ್ಣ ಮಹೋತ್ಸವ

ಅರ್ಧ ಶತಮಾನದ ಹಿಂದೆ ಯಾವ ಮಹತ್ತರ ಆಶಯಗಳಿಗಾಗಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸ್ಥಾಪನೆಯಾಯಿತೋ ಆ ಆಶೋತ್ತರಗಳ ನಿಜವಾದ ವಾರಸುದಾರ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್. ಎಫ್ ಐ)ಎಂದು ಡಿಸೆಂಬರ್ 14 ರಂದು ವಿಜಯವಾಡದಲ್ಲಿ ಜರುಗಿದ ಸಮಾರಂಭವೊಂದರಲ್ಲಿ ಹಲವಾರು ನಾಯಕರ ಸ್ಪಷ್ಟ ಪಡಿಸಿದರು. ಆರನೇ ಅಖಿಲ ಭಾರತ ಸಮ್ಮೇಳನ ಸಂದರ್ಭದಲ್ಲಿ ಭಾರತದ ಸಂಘಟಿತ ವಿದ್ಯಾರ್ಥಿ ಚಳುವಳಿಯ ಸುವರ್ಣ ಮಹೋತ್ಸವ ಅಂಗವಾಗಿ ಏರ್ಪಡಿಸಲಾಗಿದ್ದು ವಿಶಿಷ್ಟ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಚಳುವಳಿಯ ಪ್ರಾರಂಭದ ಘಟ್ಟದಿಂದ ಎಸ್ ಎಫ್. ಐ. ಸ್ಥಾಪನೆಯ ಅನಂತರದ ಅವಧಿಯ ವರೆಗ ವಿವಿಧ ಹಂತದ ನಾಯಕರು ಬಾಗವಹಿಸಿದ್ದರು.

ಸಮಾರಂಭದ ಮುಖ್ಯ ಅತಿಥಿಯಾಗಿದ್ದ 1936ರಲ್ಲಿ ಎ. ಐ. ಎಸ್. ಎಫ್. ಸಹಕಾರ್ಯದರ್ಶಿ ಹಾಗೂ ಆಂಧ್ರ ಪ್ರದೇಶದ ಕಾರ್ಯದರ್ಶಿಯಾಗಿದ್ದ ಕಾ|| ಮಾಕಿನೇನಿ ಬಸವಪುನ್ನಯ್ಯನವರು ಮಾತನಾಡುತ್ತಾ ಭಾರತ ವಿದ್ಯಾರ್ಥಿ ಚಳವಳಿಯು ಕೇವಲ ಕೆಲವು ವ್ಯಕ್ತಿಗಳ ಆಲೋಚನೆಯ ಫಲವಾಗಿರದೆ ಅಂದಿನ ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಯ ಪರಿಣಾಮ ಮತ್ತು ತ್ಯಾಗ ಬಲಿದಾನಗಳಿಂದ ಉದ್ಭವಿಸಿದ ಶಿಶುವೆಂದು ವಿವರಿಸಿದರು.

ಈ ಶತಮಾನದ ಅಂತ್ಯದ ವೇಳೆಗೆ ಸಾಮ್ರಾಜ್ಯಶಾಹಿ ವಿರೋಧಿ ಸಮರವು ಸಂಪೂರ್ಣ ವಿಜಯ ಸಾಧಿಸುವುದೆಂದು ನುಡಿದ ಬಸವಪುನ್ನಯ್ಯನವರು ಭವಿಷ್ಯ ದೃಷ್ಟಿ ಇರುವುದರಿಂದ ಭವಿಷ್ಯತ್ತು ನಿಮ್ಮದೆಂದು ನೆರೆದಿದ್ದ ವಿದ್ಯಾರ್ಥಿ ಜನಸ್ತೋಮವನ್ನು ಉದ್ದೇಶಿಸಿ ತಿಳಿಸಿದರು.

ಕಾ|| ಬಸವಪುನ್ನಯ್ಯನವರ ಸಹವರ್ತಿಗಳಾಗಿದ್ದ ಮೊಟೂರು ಹನುಮಂತರಾವ್, ಪಿ. ಟಿ. ರಂಗನೇಕರ್, ಕೂರಟಾಲ ಸತ್ಯನಾರಾಯಣ, ಶ್ರೀಮತಿ ಕಿಟ್ಟಿ ಮೇನನ್, ಮೋತಿಲಾಲ್ ಶರ್ಮಾ ಮುಂತಾದ ಹಿರಿಯ ನಾಯಕರೊಂದಿಗೆ ಎಸ್. ಎಫ್. ಐ. ಸಂಸ್ಥಾಪಕ ಕಾರ್ಯದರ್ಶಿ ಕಾ| ಬಿಮನ್ ಬಸು, ಡಾ|| ಎ. ಪಿ. ದೀಲ್, ಪಿ ಮದು, ಪೃಥ್ವಿಸಿಂಗ್, ಮಾಜಿ ಅಧ್ಯಕ್ಷರಾದ ಪ್ರಕಾಶ್‌ಕಾರತ್ ಮತ್ತು ಎಂ. ಎ. ಬೇಬಿಯವರು ಸಹ ಪಾಲ್ಗೊಂಡಿದ್ದ ಸಮಾರಂಭದ ಅಧ್ಯಕ್ಷತೆಯನ್ನು ಕಾ| ಸೀತಾರಾಮ್ ಯಚೂರಿ ವಹಿಸಿದ್ದರು. ಎ. ಐ. ಎಸ್. ಎಸ್. ನಾಯಕರಾಗಿದ್ದು ಇದೀಗ ಸಿ. ಪಿ. ಐ. ಪಕ್ಷದಲ್ಲಿ ಮುಂದುವರಿಯುತ್ತಿರುವ ಶ್ರೀಮತಿ ಗೀತಾ ಮುಖರ್ಜಿ. ಎಂ. ಪರೂಕ್ ಮುಂತಾದ ನಾಯಕರಿಂದ ಶುಭಾಶಯ ಸಂದೇಶಗಳು ತಲುಪಿದ್ದು ಅನಿವಾರ್ಯ ಕಾರಣಗಳಿಂದಾಗಿ ಸ್ವತಃ ಭಾಗವಹಿಸಲಾಗುತ್ತಿಲ್ಲವೆಂದು ತಿಳಿಸಲಾಗಿದೆ. ಪ್ರಧಾನ ಕಾರ್ಯದರ್ಶಿ ಕಾ| ನೇಪಾಲ್ ದೇವ್ ಭಟ್ಟಾಚಾರ್ಯ ಭಾರತ ವಿದ್ಯಾರ್ಥಿ ಚಳುವಳಿಯ ಎಲ್ಲಾ ಅಗ್ರನಾಯಕರಿಗೆ ಎಸ್. ಎಫ್. ಐ. ವತಿಯಿಂದ ಸನ್ಮಾನಿಸಿ ನೆನಪಿನ ಕಾಣಿಕೆಗಳನ್ನು ನೀಡಿದರು.

ಕರ್ನಾಟಕದ 'ಸಮುದಾಯ' ತಂಡದಿಂದ ಏರ್ಪಡಿಸಲಾಗಿದ್ದ 120 ಅಡಿ ಉದ್ದದ ನಾಲ್ಕು ಅಡಿ ಅಗಲವುಳ ವಿಶ್ವಶಾಂತಿ ಸಂದೇಶವನ್ನು ಹೊತ್ತ ತೈಲ ವರ್ಣ ಚಿತ್ರವು ವಿಶೇಷ ಮೆಚ್ಚುಗೆಯನ್ನು ಪಡೆದಿರುವುದಲ್ಲದೆ ಬಹುಮಾನ ಗಳಿಸಿದಿರುವುದಾಗಿ ಸಹ ವರದಿಯಾಗಿವೆ.

ಆರನೇ ಅಖಿಲ ಭಾರತ ಸಮ್ಮೇಳನದ ವೇದಿಕೆಯಲ್ಲಿ ಐದು ವಿದ್ಯಾರ್ಥಿ ಯುವಜನ ಸಂಘಟನೆಗಳು ಐಕ್ಯ ಕಾರ್ಯಾಚರಣೆಯ ಸಂಯುಕ್ತ ಹೇಳಿಕೆಯೊಂದನ್ನು ಪ್ರಕಟಿಸಿದೆ. ಯಾವುದೇ ವಿದ್ಯಾರ್ಥಿ ಯುವಜನ ಸಮ್ಮೇಳನದಲ್ಲಿ ಇತರ ಸಂಘಟನೆಗಳ ಪ್ರತಿನಿಧಿಗಳು ವೇದಿಕೆಯ ಮೇಲೆ ಬಂದು ಐಕ್ಯ ಹೋರಾಟಕ್ಕೆ ಮುಂದಾಗಿರುವುದು ಇದೇ ಪ್ರಥಮವಾಗಿದೆ

(6ನೇ ಪುಟದಿಂದ)

ವಿ. ಸೂ. ಈ ಲೇಖನ ಬರೆದು ಮುಗಿಸುತ್ತಿದ್ದಂತೆ, ಕೇಂದ್ರ ಸರಕಾರ ಕಾರ ಈ ತಿಂಗಳ ದಿ. 4 ರಂದು ಕಚ್ಚಾ ಪೆಟ್ರೋಲಿಯಂ ಆಮದಿನ ಮೇಲೆ ವಾರ್ಷಿಕ ರೂ. 228 ಕೋಟಿಯಷ್ಟು ತೆರಿಗೆಯನ್ನು ದಿ. 5 ರಂದು ಪೋಸ್ಟಲ್ ಕವರ್, ಕಾರ್ಡ್, ಇತ್ಯಾದಿಗಳ ದರಗಳ ಏರಿಕೆಯ ಮೂಲಕ ವಾರ್ಷಿಕ ರೂ 85 ಕೋಟಿಯಷ್ಟು ತೆರಿಗೆಯ ಭಾರವನ್ನೂ ಜನಕೋಟಿಯ ಮೇಲೆ ಪುನಃ ಹೇರಿದೆ ! ಇನ್ನು ಫೆಬ್ರವರಿ 1987 ರಲ್ಲಿ ಮುಂದಿನ ವರ್ಷದ ಮುಂಗಡ ಪತ್ರದಲ್ಲಿ ಏನು ಕಾದಿದೆಯೊ ?

– ಆರ್. ಚಂದ್ರ

ಫಿಲಿಪೈನ್ಸ್: ಮಾರ್ಕೋಸ್ ಪರ ಶಕ್ತಿಗಳಿಗೆ ಸೋಲು

ಜನ ತನ್ನ ಸ್ವಂತ ಇಚ್ಚೆಯಂತೆ ಅಧಿಕಾರಕ್ಕೆ ತಂದ, ತರುವುದು ಮಾತ್ರವಲ್ಲ ಅದನ್ನು ಅಧಿಕಾರದಲ್ಲಿ ಸ್ಥಾಪಿಸಲು ಮಿಲಿಟರಿಯೊಡನೆ ಸಮರ ಹೂಡಿದ ಅಪೂರ್ವ ಘಟನೆ ಫಿಲಿಫೈನ್ಸ್‌ನಲ್ಲಿ.

ಈಗ ಫಿಲಿಫೈನ್ಸ್‌ನಲ್ಲಿ ಏನು ನಡೆದಿದೆ ?

ಎರಡು ದಶಕಗಳಿಗೂ ಹೆಚ್ಚುಕಾಲ ಫಿಲಿಪ್ಪೈನ್ಸ್‌ನ ಸರ್ವಾಧಿಕಾರಿಯಾಗಿದ್ದ ಸಾಮ್ರಾಜ್ಯಶಾಹಿಗಳ ಕೈಗೊಂಬೆ ಮಾರ್ಕೋಸ್ ಕಳೆದ ವರ್ಷ ನಡೆದ ಚುನಾವಣೆಗಳಲ್ಲಿ ವಂಚನೆ ನಡೆಸಿ ತಾನು ಗೆದ್ದೆನೆಂದು ಸಾರಿಕೊಂಡಿದ್ದರೂ ಆತನ ವಿರುದ್ಧ ನಡೆದ ಜನತಾ ಆಂದೋಲನದ ಪರಿಣಾಮವಾಗಿ ಅಮೇರಿಕಾಕ್ಕೆ ಓಡಿಹೋಗಬೇಕಾಯಿತು. ವಿರೋಧ ಪಕ್ಷದ ಮುಂದಾಳುವಾಗಿದ್ದ ಶ್ರೀಮತಿ ಕೋರಜಾನ್ ಅಕ್ವಿನೋ ಫಿಲಿಪ್ಪೈನ್ಸ್‌ನ ಅಧ್ಯಕ್ಷೆರಾದರು.

ಫಿಲಿಪ್ಪೈನ್ಸ್‌ನಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ತನ್ನದೇ ಆದ ಹಿತಾಸಕ್ತಿಗಳಿವೆ. ಮಾರ್ಕೋಸ್ 1972 ರಲ್ಲಿ ಜ್ಯಾರಿಗೊಳಿಸಿದ್ದ ಲಷ್ಕರಿ ಆಡಳಿತೆಯ ಅವಧಿಯಲ್ಲಿ ಅಮೇರಿಕಾದ ಗುತ್ತೇದಾರಿ ಬಂಡವಾಳಗಾರರು ಫಿಲಿಪ್ಪೈನ್ಸ್‌ನ ಅರ್ಥ ವ್ಯವಸ್ಥೆಯನ್ನು ತಮ್ಮ ಉಪಯೋಗಕ್ಕಾಗಿ ಚೆನ್ನಾಗಿ ಬಳಸಿಕೊಂಡಿದ್ದಾರೆ. ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಫಿಲಿಪ್ಪೈನ್ಸ್‌ನಲ್ಲಿ ಎರಡು ಬೃಹತ್ ಸೈನಿಕ ನೆಲೆಗಳೂ ಇವೆ. (ಮಾರ್ಕೋಸ್ ಜೊತೆಗೆ ಸಾಮ್ರಾಜ್ಯಶಾಹಿಗಳು ಮಾಡಿಕೊಂಡಿರುವ ಒಪ್ಪಂದದಂತೆ ಕ್ಲಾರ್ಕ್ ವಿಮಾನನೆಲೆ ಮತ್ತು ಸುಬಿಕ್ ಕೊಲ್ಲಿಯ ನಾವಿಕ ನೆಲೆಗಳನ್ನು ಈ ಒಪ್ಪಂದ ಅವಧಿಯ ನಂತರ ಅಂದರೆ 1991ರ ಬಳಿಕ ನವೀಕರಿಸಬಾರದೆಂದು ಫಿಲಿಪ್ಪೈನ್ಸ್‌ನ ಜನ ಈಗಾಗಲೇ ಸರಕಾರವನ್ನು ಒತ್ತಾಯಿಸುತ್ತಿದ್ದಾರೆ.) ಈ ಕಾರಣದಿಂದ ಮಾರ್ಕೋಸ್ ವಿರುದ್ಧ ಜನ ಬಂಡೆದ್ದಾಗ ಅಮೇರಿಕಾದ ಸಾಮ್ರಾಜ್ಯಶಾಹಿಗಳು ತುಂಬಾ ಜಾಣತನ ತೋರಿಸಿ ಮಾರ್ಕೋಸ್‌ನನ್ನು ಕೈಬಿಟ್ಟು ಅಕ್ವಿನೊ ಸರಕಾರವನ್ನು ಬೆಂಬಲಿಸಲು ನಿರ್ಧರಿಸಿದರು. ಹಾಗೆಯೇ ಅಕ್ವಿನೋ ಕೂಡಾ ಅಮೇರಿಕಾವನ್ನು ಎದುರು ಹಾಕಿಕೊಳ್ಳುವ ಸಾಹಸ ಮಾಡದೆ ನಾಗರಿಕ ಆಡಳಿತವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಸೋತು ಅಮೇರಿಕಾಕ್ಕೆ ಓಡಿಹೋದ ಮಾರ್ಕೋಸ್‌ಗೆ ಈಗಲೂ ಫಿಲಿಪ್ಪೈನ್ಸ್‌ನಲ್ಲಿ ಕೆಲವರು ಬೆಂಬಲಿಗರಿದ್ದರು. ಮೊನ್ನೆ ಮೊನ್ನೆಯ ತನಕ ರಕ್ಷಣಾ ಮಂತ್ರಿಯಾಗಿದ್ದು ಇದೀಗ ವಜಾಗೊಳಿಸಲ್ಪಟ್ಟ ಜುವಾನ್ ಪೋನ್ಸ್ ಎನ್ರೈಲ್ ಇಂತಹವರಲ್ಲಿ ಪ್ರಮುಖ.

ಕಮ್ಯುನಿಸ್ಟರ ಪ್ರಭಾವ

ಹದಿನೇಳು ವರ್ಷಗಳ ಹಿಂದೆ ಪ್ರಾರಂಭವಾದ ಕಮ್ಯುನಿಸ್ಟ್ ಬಂಡಾಯ ಫಿಲಿಪ್ಪೈನ್ಸ್ ರಾಜಕೀಯದಲ್ಲಿ ಗಮನಾರ್ಹವಾದ ಶಕ್ತಿ. ಈ ದೇಶದ 41,600 ಹಳ್ಳಿಗಳಲ್ಲಿ ಶೇಕಡ ಇಪ್ಪತ್ತಕ್ಕಿಂತ ಹೆಚ್ಚಿನ ಕಡೆ ಸಶಸ್ತ್ರ ಪಡೆಗಳು ತಮ್ಮ ಪ್ರಭಾವವನ್ನು ನೆಲೆಗೊಳಿಸಿದ್ದಾರೆ. ಇಂತಹ ಸಶಸ್ತ್ರ ಕ್ರಾಂತಿಕಾರಿಗಳ ಸಂಖ್ಯೆ 20,000 ದಷ್ಟಿದೆ. ಫಿಲಿಪ್ಪೈನ್ಸ್‌ನ 73 ಪ್ರಾಂತ್ಯಗಳ ನಡುವೆ 63 ರಲ್ಲಿ ಕಮ್ಯುನಿಸ್ಟರು ತಮ್ಮ ಚಟುವಟಿಕೆಯನ್ನು ವಿಸ್ತರಿಸಿ ಕೊಂಡಿದ್ದಾರೆ. ಈಗಲೂ ನಿಷೇಧಿತವಾಗಿರುವ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆ 30,000 ದಷ್ಟಿದೆ. ಒಂದು ಮಿಲಿಯಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗದಲ್ಲಿ (ಎನ್.ಡಿ.ಎಫ್.) ಅತ್ಯಂತ ಪ್ರಭಾವಶಾಲಿಯಾಗಿರುವವರೂ ಕಮ್ಯುನಿಸ್ಟರೇ. ಎನ್.ಡಿ.ಎಫ್. ನಲ್ಲಿ ಕಮ್ಯುನಿಸ್ಟರಲ್ಲದೆ ಇತರ ಕಾರ್ಮಿಕರು, ಚರ್ಚ್ ಮತ್ತು ಬೇರೆ ಎಡಪಂಥೀಯರೂ ಸೇರಿದ್ದಾರೆ. ಎನ್.ಡಿ.ಎಫ್. ಅಧಿಕೃತವಾಗಿ ನಿಷೇಧಿಸಲ್ಪಟ್ಟಿದೆ. ಕಮ್ಯುನಿಸ್ಟರ ಜೊತೆಗೆ ಶಾಂತಿಯುತ ಮಾತುಕತೆಗಳು ನಡೆಯಬೇಕೆಂದು ಈ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ ಒತ್ತಾಯಿಸುತ್ತಿದೆ.

ಸಶಸ್ತ್ರ ಬಂಡಾಯ ನಡೆಸುತ್ತಿರುವ ಕಮ್ಯುನಿಸ್ಟರು ಮತ್ತು ಅಕ್ವಿನೋ ಸರಕಾರಗಳ ನಡುವೆ ಯುದ್ಧ ನಿಲುಗಡೆಗಾಗಿ ಮಾತುಕತೆಗಳು ನಡೆಯಬೇಕಾಗಿದ್ದ ಸಮಯದಲ್ಲಿ ಈ ಶಾಂತಿ ಯತ್ನವನ್ನು ವಿಫಲಗೊಳಿಸಲು ಎನ್ರೈಲ್ ಮತ್ತು ಆತನ ಬೆಂಬಲಿಗರು ಹೂಟ ಹೂಡಿದ್ದರು. ಎನ್ರೈಲ್ ಬೆಂಬಲಿಗರಿಂದ ಎಡಪಂಥೀಯ ಕಾರ್ಮಿಕ ಮುಂದಾಳುವೊಬ್ಬನ ಹತ್ಯೆಯೂ ನಡೆಯಿತು. ಕಮ್ಯುನಿಸ್ಟರು ಹಾಗೂ ಅವರ ಸಶಸ್ತ್ರ ದಳವಾದ ನ್ಯೂ ಪೀಪಲ್ಸ್ ಆರ್ಮಿಯನ್ನು ದಮನಿಸಬೇಕೆಂದೂ ಅವರ ಜೊತೆಗೆ ಮಾತುಕತೆ ನಡೆಸಬಾರದೆಂದೂ ಎನ್ರೈಲ್ ಪ್ರಬಲವಾಗಿ ವಾದಿಸುತ್ತಿದ್ದ. ಒಳಗೊಳಗೇ ಆತ ಮಾರ್ಕೋಸ್ ಪರವಾಗಿದ್ದ ಮತ್ತು ಸಾಮ್ರಾಜ್ಯಶಾಹಿಗಳಿಗೆ ಇಷ್ಟವಾಗುವಂತಹ ಲಷ್ಕರಿ ಆಡಳಿತೆಯನ್ನು ಬೆಂಬಲಿಸುತ್ತಿದ್ದ. ಆದರೆ ಲಷ್ಕರಿ ಆಡಳಿತೆಯ ವಿರುದ್ಧ ಮತ್ತು ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾದ ಮಾರ್ಕೋಸ್‌ನ ವಿರುದ್ಧ ಪ್ರಬಲವಾದ ಸಾಮುದಾಯಿಕ ಪ್ರತಿಭಟನೆ ಮತ್ತು ಪ್ರತಿರೋಧ ಬೆಳೆದು ಬಂದುದರಿಂದಾಗಿ ಎನ್ರೈಲ್‌ನ ಆಪ್ಪಟ ಯಶಸ್ವಿಯಾಗಲಿಲ್ಲ. ಅಧ್ಯಕ್ಷೆ ಕೊರಾಜಾನ್ ಅಕ್ವಿನೋ ಎನ್ರೈಲ್‌ನನ್ನು ಸಂಪುಟದಿಂದ ವಜಾಗೊಳಿಸಿದರಲ್ಲದೆ ನವಂಬರ ಇಪ್ಪತ್ತಾರರೆಂದು ಕಮ್ಯುನಿಸ್ಟ ಸಶಸ್ತ್ರ ಹೋರಾಟಗಾರರೊಂದಿಗೆ ಯುದ್ಧ ನಿಲುಗಡೆಯ ಒಪ್ಪಂದವನ್ನೂ ಮಾಡಿಕೊಂಡಿದ್ದಾರೆ. ಈ ಎರಡೂ ವಿದ್ಯಮಾನಗಳು ಸಾಮ್ರಾಜ್ಯಶಾಹಿ ಹಾಗೂ ಮಾರ್ಕೋಸ್ ಬೆಂಬಲಿಗರ ಕುತಂತ್ರಗಳಿಗೆ ಸೋಲುಂಟುಮಾಡಿವೆ. ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಮೊದಲ ಹಂತದ ಗೆಲುವುಂಟಾಗಿದೆ. ಫಿಲಿಪ್ಪೈನ್ಸ್‌ನ ಪ್ರಜಾಸತಾತ್ಮಕ ಶಕ್ತಿಗಳು ಇಷ್ಟರಿಂದಲೇ ತೃಪ್ತರಾಗುವಂತಿಲ್ಲ. ಈ ದೇಶದ ಅರ್ಥವ್ಯವಸ್ಥೆ ತೀರಾ ಕಂಗೆಟ್ಟು ಹೋಗಿದೆ. ಸಾಮ್ರಾಜ್ಯಶಾಹಿಯ ನಂಟಿನೊಡನೆ ಬಂಡವಾಳಶಾಹಿ ಅಭಿವೃದ್ಧಿಯ ಮಾರ್ಗವನ್ನು ಅನುಸರಿಸುವ ಯಾವುದೇ ರಾಷ್ಟ್ರ ಅನುಭವಿಸಬೇಕಾದ ಮುಗ್ಗಟ್ಟು, ರಾಜಕೀಯ, ಸಾಮಾಜಿಕ ಮತ್ತು ನೈತಿಕ ಅಧಃಪತನ ಫಿಲಿಪ್ಪೈನ್ಸ್‌ನಲ್ಲಿ ಉತ್ತುಂಗಕ್ಕೇರಿದೆ. ಈ ವಿಪತ್ತಿನಿಂದ ಹೊರಬರಬೇಕಾದರೆ ಫಿಲಿಪ್ಪೈನ್ಸ್‌ನ ನವಸಾಹತುವಾದಿ ಅಭಿವೃದ್ಧಿಯ ಮಾರ್ಗವನ್ನು ಕೈಬಿಡಲೇಬೇಕು.

ಇಸ್ರೇಲ್ ಅರಬ್ ಭೂಮಿಯನ್ನು ಕಬಳಿಸುತ್ತಿದೆ

ಇಸ್ರೇಲಿನ ಆಡಳಿತೆ ತಾನು ಆಕ್ರಮಿಸಿಕೊಂಡಿರುವ ಅರಬ್ ಭೂಮಿಯನ್ನು ಖಾಯಂ ಆಗಿ ಕಬಳಿಸುವ ಪ್ರಯತ್ನವನ್ನು ವ್ಯವಸ್ಥಿತವಾಗಿ ನಡೆಸುತ್ತಿದೆಯೆಂದು ಅರಬ್ ಪತ್ರಿಕೆಗಳು ವರದಿ ಮಾಡಿವೆ. ಕಳೆದೆರಡು ವರ್ಷಗಳಲ್ಲಿ ಇಸ್ರೇಲ್ ಇಂತಹ ಅರಬ್ ಪ್ರದೇಶದಲ್ಲಿ ತಾನು ನೆಲೆಗೊಳಿಸುವ ಇಸ್ರೇಲಿ ಪ್ರಜೆಗಳ ಸಂಖ್ಯೆ ಶೇಕಡಾ50ರಷ್ಟು ಹೆಚ್ಚಾಗಿದೆ. ಜೋರ್ಡಾನ್‌ನ ಪಶ್ಚಿಮ ತೀರದಲ್ಲಿ ಅರವತ್ತು ಸಾವಿರ ಇಸ್ರೇಲಿ ಪ್ರಜೆಗಳಿಗೆ ವಸಾಹತು ಕಲ್ಪಿಸಲಾಗಿದೆ. ಅರಬ್ ಪ್ರದೇಶಗಳನ್ನು ಇಸ್ರೇಲಿ ವಸಾಹತುಗಳಾಗಿ ಪರಿವರ್ತಿಸುವ ಕಾರ್ಯ ಇನ್ನಷ್ಟು ತೀವ್ರಗತಿಯಿಂದ ನಡೆಯಲಿದೆಯಂತೆ. ಮುಂದಿನ ವರ್ಷಗಳಲ್ಲಿ ಜೋರ್ಡಾನಿನ ಪಶ್ಚಿಮ ತೀರದಲ್ಲಿ ನೆಲೆಗೊಳಿಸಲಾಗುವ ಇಸ್ರೇಲಿಗಳ ಸಂಖ್ಯೆ 5 ಲಕ್ಷದಷ್ಟಾಗಲಿದೆ ಮತ್ತು 2010ನೇ ಇಸವಿಯೊಳಗಾಗಿ ಅದು 13 ಲಕ್ಷವಾಗುವುದೆಂದು ಅಂದಾಜು ಮಾಡಲಾಗಿದೆ. ಅರಬ್ ಪ್ರದೇಶಗಳಲ್ಲಿ ಇಸ್ರೇಲಿಗಳನ್ನು ತುರುಕುವ ಈ ಪ್ರಯತ್ನ ಆಕ್ರಮಿತ ಅರಬ್ ಭೂಮಿಯನ್ನು ಅಂತರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾಗಿ ಕಬಳಿಸುವ ಮೊದಲ ಹೆಜ್ಜೆ. ಆಕ್ರಮಿತ ಪ್ರದೇಶಗಳಾದ ಜೋರ್ಡಾನ್ ನದಿಯ ಪಶ್ಚಿಮತೀರ ಗಾಜಾ ಮರುಭೂಮಿ ಮತ್ತು ಗೋಲಾನ್ ಬೆಟ್ಟಗಳಲ್ಲಿ ಇಸ್ರೇಲ್ ತನ್ನ ಸೈನಿಕ ಕಾವಲಿನ ನೆಲೆಗಳನ್ನು ಸ್ಥಾಪಿಸಿದೆ. ಇಂತಹ ಆಕ್ರಮಿತ ಭೂಮಿಯಲ್ಲಿ ನಲವತ್ತೇಳು ಸೈನಿಕ ವಸಾಹತುಗಳನ್ನು ಸ್ಥಾಪಿಸಿ ಆ ಮೂಲಕ ಈ ಪ್ರದೇಶದ ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಸ್ವರೂಪವನ್ನು ಬಲವಂತವಾಗಿ ಬದಲಾಯಿಸಿ ಆ ಪ್ರದೇಶವನ್ನು ಇಸ್ರೇಲಿಗೆ ಸೇರಿಸಿಕೊಳ್ಳುವ ಹಂಚಿಕೆ ಇಲ್ಲಿದೆ. ಆಕ್ರಮಿತ ಅರಬ್ ಪ್ರದೇಶದಲ್ಲಿ ಅಣ್ವಸ್ತ್ರಗಳನ್ನು ಕೂಡಿಹಾಕುವ ರಹಸ್ಯ ಯೋಜನೆಯೊಂದೂ ಇದೀಗ ಬಯಲಿಗೆ ಬಂದಿದೆ. ಇಸ್ರೇಲಿನಂತಹ ದುಷ್ಟ, ಆಕ್ರಮಣಶೀಲ ಮತ್ತು ಅಂತರಾಷ್ಟ್ರೀಯ ಕಾನೂನುಗಳಿಗೆ ಎಳ್ಳಷ್ಟೂ ಗೌರವ ನೀಡದ ರಾಷ್ಟ್ರ ಇಂತಹ ದುಃಸ್ಸಾಹಸಗಳಲ್ಲಿ ತೊಡಗುವುದು ಇಡೀಜಗತ್ತಿನ ಶಾಂತಿಗೆ ಅಪಾಯಕಾರಿ.

'ಅಪರಾಧ'ಗಳಲ್ಲಿ ಜಪಾನಿನ ದಾಖಲೆ !

ಜಪಾನಿನ ಕ್ಯೂಡೋ ವಾರ್ತಾ ಸಂಸ್ಥೆ ವರದಿ ಮಾಡಿರುವಂತೆ ಆ ದೇಶದಲ್ಲಿ ಕಳೆದ ಆರುವರ್ಷಗಳ ಕಾಲ ಬೆಳೆದು ಬಂದಿರುವ ಅಪರಾಧಗಳ ಪ್ರಮಾಣ ಮಿತಿಮೀರಿ ಹೆಚ್ಚಿದ್ದು ಈ ವರ್ಷ ಅದೊಂದು ಸಾರ್ವಕಾಲಿಕ ದಾಖಲೆಯಾಗಿದೆಯಂತೆ ! ಈ ವರ್ಷ ದಾಖಲಾದ ಅಪರಾಧಗಳ ಸಂಖ್ಯೆ 21 ಲಕ್ಷಕ್ಕೂ ಹೆಚ್ಚು. ಭಯಾನಕ ಪ್ರಮಾಣದಲ್ಲಿ ಹೆಚ್ಚುತ್ತಿರುವ ಕೊಲೆ, ಸುಲಿಗೆ, ದರೋಡೆ ಮತ್ತಿತರ ಅಪರಾಧಗಳನ್ನು ಕ್ರಮಬದ್ಧವಾಗಿ ನಡೆಸಲು ಜಪಾನಿನಲ್ಲಿ ಅನೇಕ 'ಸಿಂಡಿಕೇಟ್'ಗಳು ಇವೆಯಂತೆ. ಇವುಗಳಲ್ಲಿ ನೇಮಕಾತಿ ಪಡೆದು ಅಪರಾಧ ಎಸಗುವವರ ಸಂಖ್ಯೆ 10,000ಕ್ಕೂ ಮೀರಿದೆ. ಅಪರಾಧ ನಡೆಸುವ 'ಮಾಫಿಯಾ' ಗ್ಯಾಂಗುಗಳಿಗೆ ಆಳುವರ್ಗಗಳ ಬೆಂಬಲವೂ ಇದೆ. 1984ರಲ್ಲಿ ವಿವಿಧ ಅಪರಾಧಗಳಿಗಾಗಿ ಬಂಧಿತರಾದ ಅಪ್ರಾಪ್ತ ವಯಸ್ಕರ ಸಂಖ್ಯೆ 1,74,000 !

ಶ್ರೀಲಂಕಾದಲ್ಲಿ ತಮಿಳು ಸೆರೆಯಾಳುಗಳ ಚಿತ್ರಹಿಂಸೆ

ಶ್ರೀಲಂಕಾದ ಪೂರ್ವ ಪ್ರಾಂತ್ಯದಲ್ಲಿರುವ ತಮಿಳು ಜನರನ್ನು ಅವ್ಯಾಹತವಾಗಿ ಕೊಲೆ ಮಾಡುತ್ತಿರುವ ಜಯವರ್ಧನೆ ಸರಕಾರ, ಬಂಧಿತರಾಗಿರುವ ತಮಿಳು ಹೋರಾಟಗಾರರ ಮೇಲೆ ಅಮಾನುಷವಾದ ಚಿತ್ರಹಿಂಸೆ ನಡೆಸುತ್ತಿದೆ. ಸ್ವಾತಂತ್ರ್ಯ ಕೈಯಲ್ಲಿರುವ ಅಧಿಕಾರ ಕೈದಿಗಳಾಗಿರುವ ತಮಿಳು ಹೋರಾಟಗಾರರಿಂದ ಸುಳ್ಳು ಸುಳ್ಳು ಹೇಳಿಕೆಗಳನ್ನು ಹೊರಡಿಸಲು ನ್ಯಾಶನಲ್ ಇಂಟೆಲಿಜನ್ಸ್ ಬ್ಯೂರೋ (ಎನ್.ಐ.ಬಿ.) ಎಂಬ ಕುಖ್ಯಾತ ಸಂಸ್ಥೆ ಅನುಸರಿಸುತ್ತಿರುವ ವಿಧಾನ ಅತ್ಯಂತ ಕ್ರೂರವಾದದ್ದು. ವಿಚಾರಣೆ ಎದುರಿಸುತ್ತಿರುವ ಕೈದಿಗಳು ಅಪರಾಧ ಒಪ್ಪಿಕೊಳ್ಳುವಂತೆ ಮಾಡುವ ಈ ವಿಧಾನದಲ್ಲಿ ಅವರ ಅಂಗಾಂಗಗಳ ನರಗಳನ್ನು ಕತ್ತರಿಸುವುದು, ಗುಪ್ತಾಂಗಗಳಲ್ಲಿ ಮೊನಚಾದ ಮೊಳೆ ಮುಳ್ಳು ಮುಂತಾದುವುಗಳನ್ನು ತೂರಿಸುವುದು, ಅವರಲ್ಲಿ ಪೂರ್ಣ ನಗ್ನಗೊಳಿಸಿ ತಲೆಕೆಳಗಾಗಿ ನೇತಾಡಿಸಿ ಅವರ ಮೈಮೇಲೆ ಕುದಿಸಿದ ದ್ರಾವಕವನ್ನು ಸುರಿಸುವುದು ಇತ್ಯಾದಿಗಳು ಸೇರಿವೆ. ಗಂಡು ಹೆಣ್ಣೆನ್ನದೆ ಎಲ್ಲ ಸೆರೆಯಾಳುಗಳನ್ನೂ ಸಲಿಂಗರತಿ ನಡೆಸುವಂತೆ ಬಲವಂತಮಾಡಿ ಅವರನ್ನು ದೈಹಿಕ ಹಾಗೂ ಮಾನಸಿಕ ಆಘಾತಗಳಿಗೆ ಒಳಪಡಿಸಲಾಗುತ್ತಿದೆ. ಅತ್ಯಂತ ಚಿಕ್ಕ ಕೊಠಡಿಗಳಲ್ಲಿ ನೂರಾರು ಜನ ಬಂಧಿತರನ್ನು ಪಶುಗಳಂತೆ ಕೂಡಿ ಹಾಕಲಾಗುತ್ತಿದೆ. ಇವರಲ್ಲಿ ಮುದುಕರು, ಮಕ್ಕಳು, ರೋಗಿಗಳು ಮತ್ತು ವಿಕಲಾಂಗರೂ ಸೇರಿದ್ದಾರೆ. ಇಂತಹ ಬಂಧಿತರ ಸಂಖ್ಯೆ ಐದು ಸಾವಿರಕ್ಕೂ ಹೆಚ್ಚಿದೆ.

ಈ ಅಮಾನುಷ ದೌರ್ಜನ್ಯದ ವಿರುದ್ಧ ಸೆರೆಯಾಳುಗಳು ಸೆಪ್ಟಂಬರ್ 23ರಿಂದ ಒಂದು ವಾರ ಕಾಲ ನ್ಯಾಯಾಲಯಗಳನ್ನು ಬಹಿಷ್ಕರಿಸುವ ಚಳುವಳಿ ನಡೆಸಿದ್ದರು. ಅಕ್ಟೋಬರ್ ತಿಂಗಳಲ್ಲಿ ಹದಿನೆಂಟು ಮಂದಿ ಬಂಧಿತರು ಆಮರಣಾಂತ ಉಪವಾಸ ಕೈಗೊಂಡರು. ಉಪವಾಸ ನಡೆಸಿದವರು ಮತ್ತು ದೌರ್ಜನ್ಯಗಳ ವಿರುದ್ಧ ದೂರಿತ್ತವರನ್ನು ಎನ್.ಐ.ಬಿ. ವಿಶೇಷವಾಗಿ ಗಮನಿಸಿ ಅವರನ್ನು ಇನ್ನಷ್ಟು ಕಠಿಣ ಚಿತ್ರಹಿಂಸೆಗೆ ಒಳಪಡಿಸುತ್ತಿದೆ. ಈ ಚಿತ್ರಹಿಂಸೆಯ ವಿರುದ್ಧ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿಭಟಿಸಬೇಕೆಂದು ಕೈದಿಗಳು ಮನವಿಮಾಡಿಕೊಂಡಿದ್ದಾರೆ.

ಬೆಂಗಳೂರಿಗೆ ರಾಯಭಾರಿ ಬರ್ನ್ ಬೀಡೆರ್‌ಮನ್ ಭೇಟಿ

ಪೂರ್ವ ಜರ್ಮನಿಯೊಡನೆ ಹೆಚ್ಚುತ್ತಿರುವ ತಾಂತ್ರಿಕ ಸಹಕಾರ

ದಿನಾಂಕ 23 ಹಾಗೂ 24ರಂದು ಬೆಂಗಳೂರಿಗೆ ಭೇಟಿನೀಡಿದ್ದ ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯದ ರಾಯಭಾರಿ ಡಾ॥ ಬರ್ನ್ ಬೀಡೆರ್‌ಮನ್‌ರವರು ಕರ್ನಾಟಕದ ಸರ್ಕಾರದ ಮಂತ್ರಿಗಳು ಹಾಗೂ ಮುಖ್ಯ ಅಧಿಕಾರಿಗಳೊಡನೆ ಹಾಗೂ ವಿವಿಧ ಪಕ್ಷಗಳ ಪದಾಕಾರಿಗಳೊಡನೆ ಮಾತುಕತೆ ನಡೆಸಿದರು. ಸಿ. ಪಿ. ಐ. (ಎಂ)ಪರವಾಗಿ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಹಾಗೂ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಎಸ್. ಸೂರ್ಯನಾರಾಯಣ ರಾವ್, ಸಿ. ನಂಜುಂಡಪ್ಪ, ವಿ.ಜೆ.ಕೆ ನಾಯರ್ ಹಾಗೂ ಎನ್. ಕೆ. ಉಪಾಧ್ಯಾಯ ರಾಯಭಾರಿಯವರನ್ನು ಭೇಟಿ ಮಾಡಿದರು.

ವಿಶ್ವಸಂಸ್ಥೆಯ ನಿಶ್ಶಸ್ತ್ರೀಕರಣ ಹಾಗೂ ಶಾಂತಿಯಅಧಿವೇಶನಕ್ಕೆ ಭಾರತ ಅಧ್ಯಕ್ಷ ರಾಷ್ಟ್ರವಾಗಿ ಪ್ರ. ಜರ್ಮನಿ (ಜಿ.ಡಿ. ಆರ್.) ಉಪಾಧ್ಯಕ್ಷ ರಾಷ್ಟ್ರವಾಗಿ ನಿಕಟವಾಗಿ ಸಹಕರಿಸುತ್ತಿವೆ ಶಾಂತಿಗಾಗಿ ದುಡಿಯುತ್ತಿವೆ.

ನಗರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ, ಪ್ರಜಾಸತ್ತಾತ್ಮಕ ಜರ್ಮನಿಯು ಭಾರತಕ್ಕೆ 'ರೂಪಾಯಿ ವಾಣಿಜ್ಯದ, ಅಳವಿನಲ್ಲಿಯೇ ಅನೇಕ ಕ್ಷೇತ್ರಗಳಲ್ಲಿ ಅತ್ಯುತ್ತಮ ತಂತ್ರಜ್ಞಾನವನ್ನು ನೀಡಬಹುದೆಂದರು. ಭಾರತ-ಜರ್ಮನ್ ವಾಣಿಜ್ಯವು ಮುಂದಿನ ವರ್ಷ 500 ಕೋಟಿಗಳ ಗಡಿ ದಾಟಿ ಬೆಳೆಯುವುದೆಂದರು. ಪ್ರ. ಜರ್ಮನಿ (ಜಿ.ಡಿ.ಆರ್.) ನಿಂದ ಭಾರತ ಆಮದುಮಾಡಿಕೊಳ್ಳುತ್ತಿರುವ ವಸ್ತುಗಳಲ್ಲಿ ರಸಗೊಬ್ಬರ, ಡೀಸೆಲ್ ವಿದ್ಯುತ್ ಉತ್ಪಾದಕಗಳು (ಜನರೇಟರ್‌ಗಳು), ಮುದ್ರಣಯಂತ್ರಗಳು ಮೊದಲಾದವು ಪ್ರಮುಖವಾಗಿವೆ ಎಂದರು. ಅದರಲ್ಲಿ ವಿದ್ಯುತ್ ಕ್ಷಾಮದಿಂದ ಬಳಲುತ್ತಿರುವ ಕರ್ನಾಟಕಕ್ಕೆ ಶಕ್ತಿ ಉತ್ಪಾದನೆಯ ಹಲವಾರು ಪ್ರಸ್ತಾಪಗಳನ್ನ ಸರಕಾರದ ಮುಂದೆ ಮಂಡಿಸಿರುವುದಾಗಿ ತಿಳಿಸಿದರು. 700 ಕಿಲೊವ್ಯಾಟ್‌ನಿಂದ 1000 ಕಿಲೋವ್ಯಾಟ್‌ನವರೆಗೂ ವಿದ್ಯುತ್ ತಯಾರಿಸುವ ಯಂತ್ರಗಳನ್ನು ನೀಡಲು, ವಿದ್ಯುತ್ ತಂತಿಗಳಲ್ಲಿ ಆಗುತ್ತಿರುವ ಅಪರಿಮಿತ ನಷ್ಟವನ್ನು ತಡೆಗಟ್ಟಲು ತಾಂತ್ರಿಕ ನೆರವು ನೀಡುವುದು ಮೊದಲಾದ ಅನೇಕ ಸಲಹೆಗಳನ್ನು ಮುಂದಿರಿಸಲಾಗಿದೆ ಎಂದರು.

ಐಕ್ಯರಂಗದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಪ. ಜರ್ಮನಿಯಲ್ಲಿ ಶೇ 15ರಷ್ಟು ವಿದ್ಯುತ್ ಅನ್ನು ಅಣು ಮೂಲಗಳಿಂದ ಪಡೆಯಲಾಗುವುದು. ಅಣುಶಕ್ತಿ ಸ್ಥಾವರಗಳು ನಗರಗಳಿಂದ ದೂರವಾಗಿ ಕಾಡಿನಲ್ಲಿ ಮರೆಯಾಗಿವೆ ಎಂದರು. ಪತ್ರಿಕಾ ಪ್ರತಿನಿಧಿಯೊಬ್ಬರ ಪ್ರಶ್ನೆಗೆ ಉತ್ತರವಾಗಿ ಹಿಂದೆ ಪ್ರ. ಜರ್ಮನಿಯಲ್ಲಿ ಅನೇಕ ಉದ್ಯೋಗಗಳು ಖಾಲಿಯಿದ್ದ ಪರಿಸ್ಥಿತಿ ತಪ್ಪಿ ಅತ್ಯಾಧುನಿಕ ತಂತ್ರಜ್ಞಾನದಿಂದ ಹೆಚ್ಚು ಅತ್ಯುತ್ತಮ ಉತ್ಪಾದಕತೆಯನ್ನು ಸಾಧಿಸಿರುವುದಾಗಿ ತಿಳಿಸಿದರು. ಐಕ್ಯರಂಗದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಪ. ಜರ್ಮನಿಯಲ್ಲಿಯೂ ಜನಸಂಖ್ಯೆಯ ಬೆಳವಣಿಗೆಯ ಕೊರತೆ ಇದ್ದರೂ ಅಲ್ಲಿ ಎರಡು ದಶಲಕ್ಷ ತುರ್ಕಸ್ಥಾನ ಮತ್ತಿತರ ದೇಶಗಳ ಕಾರ್ಮಿಕರ ಪ್ರಯೋಜನ ಪಡೆದು ಕೈಗಾರಿಕಾ ಉತ್ಪಾದನೆ ಹೆಚ್ಚು ಮಾಡಿಕೊಳ್ಳಲಾಯಿತು ಆದರೆ ಮಾರುಕಟ್ಟೆ ಕುಸಿದು ಬಿಕ್ಕಟ್ಟು ಉಂಟಾದಾಗ ನಿರುದ್ಯೋಗ ಹೆಚ್ಚುತ್ತದೆ. ಇದು ಜನಾಂಗವಾದ ಮೊದಲಾದ ವಿಛಜಕ ಪ್ರವೃತ್ತಿಗಳಿಗೆ ಎಡೆಕೊಡುತ್ತದೆ. ಪ. ಜರ್ಮನಿಯಲ್ಲಿ ಇವುಗಳ ಬಾಧೆಯೇ ಇಲ್ಲವೆಂದರು.

○

'ಕಾಂಗ್ರೆಸ್ ಪಕ್ಷವೆಂಬುದು ಉಳಿದಿಲ್ಲ ಅದು ಸರ್ಕಾರದ ಅಧೀನದಲ್ಲಿದೆ' — ಸುರ್ಜಿತ್

(1ನೇ ಪುಟದಿಂದ)

ಹೆಚ್ಚೆಚ್ಚು ದಮನ, ಅತ್ಯಾಚಾರ, ರಾಜೀವ್‌ಗಾಂಧಿ ಸರಕಾರದ ಧೋರಣೆಗಳ ಬಗ್ಗೆ ತೀವ್ರ ಅಸಂತೃಪ್ತಿ, ಅದರಲ್ಲಿನ ವರ್ಗಪಕ್ಷಪಾತದ ಬಗ್ಗೆ ಹೆಚ್ಚೆಚ್ಚು ಪ್ರಜ್ಞೆ ಬೆಳೆಯುತ್ತಿರುವುದು ಕಂಡುಬರುತ್ತಿದೆ. ಇದರ ಫಲವಾಗಿ ಭೂಮಿಯ ಪ್ರಶ್ನೆ ಅತ್ಯಂತ ನಿರ್ಣಾಯಕ ಪ್ರಶ್ನೆಯಾಗಿ ಬೆಳೆಯುತ್ತಿದೆ ಎಂಬ ಕಾಂ. ಸುರ್ಜಿತ್ ಇದನ್ನೂ ಕೃಷಿಕ್ರಾಂತಿಯ ಮೂಲಕವಷ್ಟೇ ಪರಿಹರಿಸಲು ಸಾಧ್ಯವಾದ್ದರಿಂದ ಈ ಹೋರಾಟದಲ್ಲಿ ಕೃಷಿ ಕಾರ್ಮಿಕರ ಹಾಗೂ ರೈತರ ಐಕ್ಯತೆ ಅತ್ಯಂತ ಮಹತ್ವ ಹೊಂದಿದೆ ಎಂದರು.

ಅಂತರಾಷ್ಟ್ರೀಯ ರಂಗದಲ್ಲಿ ಶಾಂತಿಗಾಗಿ ಹೋರಾಟ ಕಾರ್ಮಿಕರ ಬೇಡಿಕೆಗಳು ಹಾಗೂ ಸಮಾಜವಾದದ ರಕ್ಷಣೆ ಇವೆಲ್ಲಾ ಪರಸ್ಪರ ಸಂಬಂಧಪಟ್ಟ ಪ್ರಶ್ನೆಗಳಾಗಿದ್ದು, ಈ ಹಿನ್ನೆಲೆಯಲ್ಲಿ ಇತ್ತೀಚಿನ ದೆಹಲಿ ಘೋಷಣೆಯ ಮಹತ್ವವನ್ನು ಕೃಷಿ ಕಾರ್ಮಿಕರೂ ಸೇರಿದಂತೆ ಎಲ್ಲಾ ಜನ ವಿಭಾಗಗಳ ನಡುವೆ ಕೊಂಡೊಯ್ಯಬೇಕಾಗಿದೆಯೆಂದ ಕಾಂ. ಸುರ್ಜಿತ್ ದೇಶದ ರಾಜಕೀಯದ ಬಗ್ಗೆ ಮಾತನಾಡುತ್ತಾ ವಾಸ್ತವದಲ್ಲಿ ಕಾಂಗ್ರೆಸ್ ಪಕ್ಷವೆಂಬುದೊಂದು ಉಳಿದಿಲ್ಲ, ಸರ್ಕಾರದ ಅಧೀನದಲ್ಲಿದೆ ಉಳಿದ ಬೂರ್ಜ್ವಾಪಕ್ಷಗಳೂ ವಿಘಟನೆಯ ಸ್ಥಿತಿಯಲ್ಲಿವೆ, ಕೇವಲ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಷ್ಟೆ ಪರ್ಯಾಯವಾಗಿ ಮೂಡಿಬರುತ್ತಿವೆ ಎಂದರು.

ಸರ್ಕಾರದ 'ಹೊಸ ಇಪ್ಪತ್ತಂಶ' ಕಾಂಗ್ರೇಸ್ ತನ್ನ ವಿಫಲತೆಯನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆ ಎಂದ ಕಾ॥ಸರ್ಜಿತ್ ಅದರ ಕೇವಲ ಎರಡು ಅಂಶಗಳನ್ನಾದರೂ ಕಾಂಗ್ರೆಸ್ ಸರಕಾರ ಮಾಡಿತೋರಿಸಲಿ ಎಂದು ಸವಾಲು ಹಾಕಿದರ.

(1) 1974ರ ಕಾಂಗ್ರೆಸ್ ಸಮಾವೇಶದ ನಿರ್ಣಯದಂತೆ ಎಲ್ಲಾ ರಾಜ್ಯಗಳಲ್ಲಿ ಗೇಣಿದಾರರ ದಾಖಲೆ ನಡೆಯಲಿ ಇದುವರೆಗೆ ಈ ಅಂಶವನ್ನು ಜಾರಿಗೆ ತಂದ ಏಕ ಮಾತ್ರ ರಾಜ್ಯವೆಂದರೆ ಪಶ್ಚಿಮ ಬಂಗಾಳ.

(2) ಭಾರತ ಆಹಾರ ನಿಗಮದ ದಾಸ್ತಾನಿನಲ್ಲಿರುವ 2.6 ಕೋಟಿ ಟನ್ ಧಾನ್ಯಗಳಲ್ಲಿ ಕೇವಲ ಒಂದು ಕೋಟಿ ಟನ್‌ನ್ನು ಕೃಷಿಕಾರ್ಮಿಕರಿಗೆ ಕೂಲಿಕೊಡಲು ಬಳಸಲಿ. ಇದರಿಂದ ಒಂದು ವರ್ಷಕ್ಕೆ 7 ಲಕ್ಷ ಕೃಷಿಕಾರ್ಮಿಕರಿಗೆ ಉದ್ಯೋಗಾವಕಾಶವಾಗುತ್ತದೆ.

ಓದುಗರ ಗಮನಕ್ಕೆ

ರಾಜೀವ್ ಗಾಂಧಿ ಸರಕಾರ ಪೇಪರ್, ಪೋಸ್ಟೇಜ್‌ಗಳ ಬೆಲೆ ಹೆಚ್ಚಿಸಿರುವುದರಿಂದ ಜನವರಿಯಿಂದ ಐಕ್ಯರಂಗದ ಬೆಲೆಯನ್ನು ಹೆಚ್ಚಿಸಬೇಕಾಗಿ ಬಂದಿದೆ. ಬಿಡಿ ಪತ್ರಿಕೆಯ ಬೆಲೆ ರೂ 1/-

ವಾರ್ಷಿಕ ಚಂದಾ ರೂ 50/-

ಅರ್ಧವರ್ಷಕ್ಕೆ ರೂ 25/-

ಐಕ್ಯರಂಗದ ಓದುಗರು ಸಹಕರಿಸಬೇಕಾಗಿ ವಿನಂತಿ.

ಸಂಪಾದಕ ಮಂಡಳಿ

ಸಿ. ಪಿ. ಐ. (ಎಂ) ಗೆ ಮತನೀಡಿ

ಕರ್ನಾಟಕದಲ್ಲಿ ಮೊದಲ ಬಾರಿಗೆ ಜಿಲ್ಲಾ ಪರಿಷತ್ ಚುನಾವಣೆ ತಾ। 2-1-1987 ರಂದು ನಡೆಯಲಿದೆ. ಹಿಂದಿನ ತಾಲ್ಲೂಕ್ ಬೋರ್ಡ್‌ಗಳು ಮತ್ತು ಪಂಚಾಯ್ತಿಗಳಿಗಿಂತ ವಿಭಿನ್ನವಾಗಿ ಹೆಚ್ಚಿನ ಅಧಿಕಾರ ಸಂಪನ್ಮೂಲಗಳನ್ನು ಹೊಂದಿರುತ್ತದೆ.

ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳ ಕೆಲಸ ಕಾರ್ಯಗಳನ್ನು ಅಭ್ಯಾಸ ಮಾಡಿ ಮಂತ್ರಿ ಶ್ರೀಯುತ ನಜೀರ್ ಸಾಹೇಬರು ಕರ್ನಾಟಕದಲ್ಲೂ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿ ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಿದರು. ಶಾಸನ ಸಭೆ ಅದನ್ನು ಸೆಲೆಕ್ಟ್ ಸಮಿತಿಗೆ ಒಪ್ಪಿಸಿತ್ತು. ಆ ಸೆಲೆಕ್ಟ್ ಸಮಿತಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಾಜಿ ಶಾಸಕ ಕಾ॥ ಎಸ್. ಸೂರ್ಯನಾರಾಯಣ ರಾವ್ ಸಹ ಇದ್ದರು. ಆ ಮಸೂದೆಯನ್ನು ಉತ್ತಮಗೊಳಿಸಲು ಹಾಗೂ ಮಂಡಲ ಪಂಚಾಯ್ತಿಗೆ ತಲಾ 5 ರೂ ಕೊಡಬೇಕೆಂದು ಇದ್ದಿದ್ದನ್ನು 10 ರೂಗಳಿಗೆ ಏರಿಸಲು ಸಲಹೆ ಮಾಡಿ ಅದು ಕಾರ್ಯಗತವಾಗುವ ಹಾಗೆ ಶ್ರಮಿಸಿದ್ದಾರೆ.

ಅಧಿಕಾರ ವಿಕೇಂದ್ರೀಕರಣ ಆಗುವುದು ಸರಿಯಾದರೂ ಅದು ಯಾರ ಕೈಲಿ ಹೋಗುತ್ತೆ ಎಂಬುದು ಮುಖ್ಯ. ಪಶ್ಚಿಮ ಬಂಗಾಳದಲ್ಲಿ ಬಡಜನರ ಪರವಾಗಿ ಅವರ ಹಿತಕ್ಕಾಗಿ ಶ್ರಮಿಸಲು ಸಾಧ್ಯವಾಗಿರುವುದಕ್ಕೆ ಮುಖ್ಯವಾದ ಕಾರಣ ಅಲ್ಲಿಯ ರೈತ ಸಂಘಟನೆ ಮತ್ತು ಕಾರ್ಮಿಕ ವರ್ಗದ ರೈತ ಕಾರ್ಮಿಕರನ್ನು ಹೊಂದಿರುವ ಅವರ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಲಿಷ್ಠವಾದ ಹೋರಾಟಗಳು.

ಜನತಾ ಪಕ್ಷ ಜಿಲ್ಲಾ ಪರಿಷತ್ ಚುನಾವಣೆ ನಡೆಸುವುದರಿಂದ ಗ್ರಾಮೀಣ ಪ್ರದೇಶದ ಜನತೆಯ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತೆ ಎಂಬ ರೀತಿಯಲ್ಲಿ ನಮ್ಮ ಸಾಧನೆಯನ್ನು ನೋಡಿ ಓಟು ಕೊಡಿ ಎಂದು ಅಬ್ಬರದ ಪ್ರಚಾರ ಮಾಡುತ್ತಿದೆ. ಜಿಲ್ಲಾ ಪರಿಷತ್ ರಚನೆ ಆದ ಮೇಲೆ ಕೆಲವು ಅಭಿವೃದ್ಧಿ ಕಾರ್ಯಗಳು ನಡೆಯುವುದೇ ವಿನಃ, ಗ್ರಾಮೀಣ ಜನತೆಯ ಮೂಲಭೂತ ಪ್ರಶ್ನೆಗಳಾದ ಬಂಜರು ಭೂಮಿ ಹಂಚಿಕೆ, ಉದ್ಯೋಗ ಅವಕಾಶ, ನಿರುದ್ಯೋಗ ನಿವಾರಿಸುವ ಪ್ರಶ್ನೆ, ಬೆಲೆ ಏರಿಕೆ ತಡೆಗಟ್ಟುವ ಪ್ರಶ್ನೆ, ಕೇಂದ್ರ-ರಾಜ್ಯ ಸರ್ಕಾರಗಳ ತೆರಿಗೆಯ ಪ್ರಶ್ನೆಗಳು ಶ್ರೀಸಾಮಾನ್ಯರನ್ನು ಕಾಡುತ್ತಲೇ ಇರುತ್ತದೆ.

ಹಲವಾರು ವರ್ಷಗಳಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರೈತರ ಮತ್ತು ಕಾರ್ಮಿಕರ ಮಧ್ಯೆ ದುಡಿಯುತ್ತಾ ಬಂದಿದೆ. ರೈತರನ್ನು ಭಾದಿಸುತ್ತಿರುವ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟಗಳನ್ನು ಮಾಡಿ ಸಿ. 12 ಬೇಡಿಕೆಗಳನ್ನು ಇಟ್ಟು 29-9-86 ರಂದು ರಾಜ್ಯದ ಮೂಲೆ, ಮೂಲೆಗಳಿಂದ 50 ಸಹಸ್ರಕ್ಕೂ ಹೆಚ್ಚು ರೈತರು ವಿಧಾನ ಸೌಧಕ್ಕೆ ಬಂದು ಮನವಿ ಅರ್ಪಿಸಲು ಹೋದಾಗ ರೈತರ ಪ್ರತಿನಿಧಿಗಳನ್ನು ಬರಮಾಡಿಕೊಂಡು ಅವರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಜನತಾ ಪಕ್ಷದ ಯಾವ ಮಂತ್ರಿಯೂ ಇರಲಿಲ್ಲ. ಇದ್ದ ಗೃಹಮಂತ್ರಿ ಬಾಯಿ ಹುಣ್ಣು ಎಂದು ನೆಪ ಹೇಳಿ ರೈತರ ಪ್ರತಿನಿಧಿಗಳನ್ನ ನೋಡದ ರೈತ ವಿರೋಧಿ ನಿಲುವನ್ನು ವ್ಯಕ್ತಪಡಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಚುನಾವಣೆ ಒಂದು ರಾಜಕೀಯ ಹೋರಾಟ, ಧೋರಣೆಗಳ ಸಂಘರ್ಷ ವೇದಿಕೆ. ಹೊರಗಡೆ ಕಾರ್ಮಿಕರ ರೈತರ, ಶ್ರೀಸಾಮಾನ್ಯರ ಪ್ರಶ್ನೆಯನ್ನು ತೆಗೆದುಕೊಂಡು ಹೋರಾಟ ಮಾಡುವ ಜೊತೆಗೆ ಜಿಲ್ಲಾ ಪರಿಷತ್‌ಗಳಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತವನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಗಟ್ಟಿ, ಅಭಿವೃದ್ಧಿ ಯೋಜನೆಗಳಿಗೆ ಹಣಖರ್ಚು ಆಗುವಂತೆ ಹೋರಾಟ ಮಾಡಲು ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಪರಿಷತ್ ಚುನಾವಣೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಸ್ಪರ್ಧಿಸುತ್ತಿದೆ.

198_ ಮತ್ತು 1985 ರ ಚುನಾವಣೆಯಲ್ಲಿ, ಜನತಾ ಪಕ್ಷ ಕಾಂಗ್ರೆಸ್ ಸರಕಾರದ ಸರ್ವಾಧಿಕಾರಿ ಪ್ರವೃತ್ತಿಯನ್ನು ಎದುರಿಸಲು ಕಮ್ಯುನಿಸ್ಟ್ ಪಕ್ಷಗಳ ಹತ್ತಿರ ಹೊಂದಾಣಿಕೆ ಮಾಡಿಕೊಂಡಿತ್ತು 1985 ರ ಚುನಾವಣೆಯಲ್ಲಿ ಬಹುಮತ ದೊರಕಿದ ಮೇಲೆ ಅದರ ಹಿಂಯಣ್ಣನ ಸ್ವಭಾವವನ್ನು ತೋರಿಸಿವೆ.

ಆದ್ದರಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮತದಾರರಲ್ಲಿ ಮನವಿ ಮಾಡುವುದೇನೆಂದರೆ ಕಾರ್ಮಿಕರ-ರೈತರ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗೆ ನಿಮ್ಮ ಅಮೂಲ್ಯವಾದ ಮತವನ್ನು ನೀಡುವುದರ ಮೂಲಕ ಪಟ್ಟಭದ್ರ ಹಿತಗಳ ಕಪಿಮುಷ್ಠಿಯನ್ನು ಜಿಲ್ಲಾ ಪರಿಷತ್‌ನಲ್ಲಿ ಸಮರ್ಥವಾಗಿ ಎದುರಿಸಲು ಅನುವು ಮಾಡಿಕೊಡಬೇಕೆಂದು ಮತದಾರರಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

— ಎಸ್. ಸೂರ್ಯನಾರಾಯಣ ರಾವ

Printed & Published by P. Ramachandra Rao on behalf of the Commuaist Party of India [Marxist] Karnataka State Committee, K. V. Temple Stree, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N. K. Upadhyaya